**ನೂಪುರ ಭ್ರಮರಿ–ನೃತ್ಯಸಂಶೋಧನ ನಿಯತಕಾಲಿಕೆ (2321– 2519 ISSN NO)**

**ಸಂಚಿಕೆ 2; ಸಂಪುಟ 15 2021 ; ಅಂಕಣ- ಭರತಕೌತುಕ**

No part of this publication is allowed for copying or reproducing. Copyright protected. Copyright infringement is punishable offence.

# *ಪ್ರಾಚೀನ ಗಾಂಧರ್ವ - ಗಂಧರ್ವರ ಸಂಗೀತ*

**ಕಾಂಚನ ರೋಹಿಣಿ ಸುಬ್ಬರತ್ನಂ**

## ಗಾಂಧರ್ವವೇದ

ಭಾರತೀಯ ಸಂಗೀತಶಾಸ್ತ್ರವು ಸಾವಿರಾರು ವರ್ಷಗಳಿಗಿಂತಲೂ ಪ್ರಾಚೀನದಿಂದಲೇ ಒಂದು ತಂತ್ರವನ್ನು ನಿರ್ಮಿಸಿಕೊಂಡಿದೆ. ಅದೆಂದರೆ ಪ್ರಾಚೀನತಮವಾದ ರಾಗ, ತಾಳ, ಪ್ರಬಂಧ ಮುಂತಾದುವುಗಳನ್ನು ಶುದ್ಧರೂಪದಲ್ಲಿಯೇ ಉಳಿಸಿಕೊಂಡು ಬರುವುದಕ್ಕೆಂದು ಕಟ್ಟುನಿಟ್ಟಾದ ಕ್ರಮವನ್ನೂ ಅನುಲ್ಲಂಘನೀಯವಾದ ಲಕ್ಷಣವನ್ನು ಏರ್ಪಡಿಸಿ ಗ್ರಂಥ ನಿರ್ಮಾಣದ ಮೂಲಕ ಸಂರಕ್ಷಿಸುವುದು. ಹೀಗೆ ಮಾರ್ಗಸಂಗೀತ, ಗಾಂಧರ್ವ ಎಂಬ ಹೆಸರುಗಳಲ್ಲಿ ಪುರಾತನವಾದ ಸಂಗೀತವನ್ನು ನಮ್ಮ ಹಿಂದಿನವರು ಬಹುಕಾಲ ಉಳಿಸಿಕೊಂಡಿದ್ದರು. ಸಂಗೀತೇತರವಾದ, ವಿಶೇಷವಾಗಿ ಧಾರ್ಮಿಕವಾದ ಅಥವಾ ಆಧ್ಯಾತ್ಮಿಕವಾದ, ರಕ್ಷಕ (preservative) ಸಾಂಕೇತಿಕ ಅಂಶಗಳನ್ನು ಸಹ ಇಂತಹ ಪುರಾತನ ಸಂಗೀತವಸ್ತುಗಳಿಗೆ ಅಳವಡಿಸಿ ಅವುಗಳು ಕೆಡದಂತೆ ಇಡುವುದು ಇದರ ಈ ತಂತ್ರದ ಮುಖ್ಯೋದ್ದೇಶವಾಗಿದ್ದು ಕಾರ್ಯೋನ್ಮುಖವಾಗಿದ್ದವು. ಗೌತಮಧರ್ಮಸೂತ್ರವು ಋಕ್, ಯಜುರ್, ಸಾಮ ಹಾಗೂ ಅಥರ್ವವೆಂಬ ನಾಲ್ಕು ವೇದಗಳಿಗೆ ಕ್ರಮವಾಗಿ ಆಯುರ್ವೇದ, ಧನುರ್ವೇದ, ಗಾಂಧರ್ವವೇದ ಮತ್ತು ಅರ್ಥಶಾಸ್ತ್ರ (ಕೆಲವರ ಅಭಿಪ್ರಾಯದಲ್ಲಿ ಸ್ಥಾಪತ್ಯ)ಗಳೆಂಬ ನಾಲ್ಕು ಉಪವೇದಗಳನ್ನು ಹೇಳಿದೆ. (IX. 19). ಈ ರೀತಿ ಗಾಂಧರ್ವವು ಮೊದಲಿನಲ್ಲಿ ಶುದ್ಧ ವೈದಿಕ ಕಲ್ಪನೆಯಾಗಿದ್ದು ಕಾಲಕ್ರಮದಲ್ಲಿ ಲೌಕಿಕಸಂಗೀತವೂ ಅದನ್ನು ತನ್ನದಾಗಿಸಿಕೊಂಡಿರಬೇಕು. ವಿಶಾಖಿಲ, ದತ್ತಿಲ, ಮತಂಗರಂತಹ ಸಂಗೀತಶಾಸ್ತ್ರಪ್ರವರ್ತಕರು ಸಹ ಗಾಂಧರ್ವವನ್ನು ಕೇವಲ ವೈದಿಕ ಕರ್ಮಾಂಗವಾಗಿ ಅಥವಾ ವೇದನಿಷ್ಠವಾಗಿ ಹೇಳಿದ್ದಾರೆ. ಭರತನು ಕಾಲಾನುಕ್ರಮದಲ್ಲಿ ಇವರಿಗಿಂತ ಪ್ರಾಚೀನನಾದರೂ ಬಹುಶಃ ಮೊದಲಬಾರಿಗೆ ಅದನ್ನು ನಾಟ್ಯಾಂಗವಾಗಿ ಹೇಳಿ ಲೌಕಿಕ ಪ್ರಯೋಗದ ವ್ಯಾಪ್ತಿಯನ್ನು ತಂದುಕೊಟ್ಟನು. ಮಾರ್ಗಸಂಗೀತವೆಲ್ಲ ಶಿವಸ್ತುತಿಯಲ್ಲೇ ವಿನಿಯೋಗವಾಗುತ್ತಿತ್ತು. ಗ್ರಾಮ, ಜಾತಿ, ಕಪಾಲಕಂಬಲಾದಿಗಳು ಮಾತ್ರ ಗಾಂಧರ್ವವೆಂದೂ ವಾಗ್ಗೇಯಕಾರರಿಂದ ದೇಶೀ ರಾಗಗಳಲ್ಲಿ ಎಂದರೆ ಗ್ರಾಮರಾಗಗಳಲ್ಲದವುಗಳಲ್ಲಿ ಜನರಂಜನೆಗೆಂದು ರಚಿತವಾದುದು ಗಾನವೆಂದು ಹೇಳಲಾಗುತ್ತಿತ್ತು. ಮೂಲತಃ ಗಾಂಧರ್ವವೆಂದರೆ ಗಂಧರ್ವರು ಹಾಡಿ - ನುಡಿಸುತ್ತಿದ್ದ ಸಂಗೀತವೆಂದೇ ಅರ್ಥವಿದ್ದಿತು. ಈ ಗಂಧರ್ವರೆಂದರೆ ಶ್ರೇಷ್ಠರಾದ ಅಥವಾ ವೃತ್ತಿವಂತರಾದ ಗಾಯಕರೇ ಆಗಿದ್ದರೆಂದು ತೋರುತ್ತದೆ. ಗಂಧರ್ವ ಶಬ್ದಕ್ಕೆ ಯಕ್ಷಕಿನ್ನರ ಕಿಂಪುರುಷಾದಿಗಳಂತಹ, ಸಂಗೀತ ಪ್ರಿಯರಾದ ಅತಿಮಾನವರೆಂಬ ರೂಢ್ಯರ್ಥವೂ ಇದೆ. ಗ್ರೀಕರ ಸೆಂಟಾರುಗಳ ಕಲ್ಪನೆಯೂ ಇದೇ ಆಗಿದೆ.





Copyright Protected

No part of this publication is allowed for copying or reproducing. Copyright protected. Copyright infringement is punishable offence.



ದತ್ತಿಲನು ಸ್ವಯಂಭೂವಿನಿಂದ ಗಾಂಧರ್ವವು ನಾರದ ಹಾಗೂ ಇನ್ನಿತರ ಗಂಧರ್ವರಿಗೆ ಕೊಡಲ್ಪಟ್ಟಿತೆಂದೂ, ಇದು ನಂತರ ಭೂಲೋಕಕ್ಕೆ ನಾರದನಿಂದ ಕೊಡಲ್ಪಟ್ಟಿತೆಂದೂ ಹೇಳಿದೆ. ಹೀಗೆ ಅತಿಮಾನುಷವೂ ದಿವ್ಯವೂ ಆದ ಗಾನಕ್ಕಾಗಿ ಗಂಧರ್ವರನ್ನೂ ವಾದನಕ್ಕಾಗಿ ಯಕ್ಷಕಿನ್ನರಕಿಂಪುರುಷರನ್ನೂ, ನರ್ತನಕ್ಕಾಗಿ ಅಪ್ಸರೆಯರನ್ನೂ ಸಂಸ್ಕೃತ ವಾಙ್ಮಯವು ಬಹಳ ಪ್ರಾಚೀನಕಾಲದಿಂದಲೂ ಸೃಷ್ಟಿಸಿಕೊಂಡಿದೆ. ಇವರುಗಳ ಉಲ್ಲೇಖವು ವೈದಿಕಸಾಹಿತ್ಯ, ಪುರಾಣಗಳು, ಇತಿಹಾಸ, ಪ್ರಾಚೀನ ಕಾವ್ಯನಾಟಕಾದಿಗಳಲ್ಲಿ ಪದೇ ಪದೇ ಕಂಡುಬರುತ್ತದೆ.



Black Apsara - Ajanta.



Apsaras of Cambodia.

Copyright protected

No part of this publication is allowed for copying or reproducing. Copyright protected. Copyright infringement is punishable offence.



Flying Apsara of Japan.

ಗಾಂಧರ್ವವು ಸಾಮಗಾನಕ್ಕೆ ಉಪವೇದವೆಂದು ಶೌನಕಮುನಿಯು ಹೇಳಿದ್ದಾನೆ. ಸಾಮಗಾಯನದ ಕ್ರುಷ್ಟವೆಂಬ ಸ್ವರದಿಂದ ದೇವತೆಗಳೂ ಪ್ರಥಮವೆಂಬ ಸ್ವರದಿಂದ ಮನುಷ್ಯರೂ ದ್ವಿತೀಯ ಸ್ವರದಿಂದ ಗಂಧರ್ವರು - ಅಪ್ಸರಸೆಯರೂ ತೃತೀಯ ಸ್ವರದಿಂದ ಋಷಿಗಳೂ ಚತುರ್ಥದಿಂದ ಪಿತೃಗಳು - ಅಂಡಜ ಪ್ರಾಣಿಗಳೂ ಪಂಚಮದಿಂದ ಅಸುರರು - ರಾಕ್ಷಸರೂ ಷಷ್ಠ ಅಥವಾ ಅತಿಮಂದ್ರದಿಂದ ಔಷಧವನಸ್ಪತಿಗಳೂ ಜೀವಿಸುತ್ತಿವೆ ಎಂಬ ಪ್ರಶಂಸೆಯು ಸಂಹಿತೆಗಳಲ್ಲಿ ಕಂಡುಬರುತ್ತದೆ. ಗಾಂಧರ್ವವೇದವೆಂಬ ಒಂದು ವಿಸ್ತಾರವಾದ ಶಾಸ್ತ್ರಗ್ರಂಥವು ಇತ್ತೆಂಬುದಕ್ಕೆ ಸೂಚನೆಗಳಿವೆ. ಅದರಲ್ಲಿ ಮೂವತ್ತಾರು ಸಾವಿರಶ್ಲೋಕಗಳಿದ್ದವೆಂದೂ, ಸಪ್ತಸ್ವರೋತ್ಪತ್ತಿ ಕಥನ, ವೀಣಾ, ಕಾಲ, ರಾಗ, ಮಿಶ್ರ, ತಾಲ, ಗೀತಿಕಾ, ಲಾಸಿಕೋಲ್ಲಾಸ, ಮೇಲ, ಜಾತಿಗ್ರಹಲಯಸ್ಥಾನ, ಮಾರ್ಗಾಂಗಪ್ರಕ್ರಿಯಾಕ್ರಿಯಾ, ಕಾಲಜ್ಞಾನವಾದ್ಯವಲ್ಲೀ, ತುರಂಗರತಿಸಾರಂಗಸಿಂಹಲೀಲಾ, ಅಂಗಹಾರವಿಕ್ಷೇಪ, ಸಂಕ್ಷೋಭಣ ಮುಂತಾದ ತಂತ್ರಗಳುಳ್ಳ ಅಧ್ಯಾಯಗಳು ಅದರಲ್ಲಿದ್ದುವೆಂದೂ ಯಾಮಲಾಷ್ಟಕತಂತ್ರದಿಂದ ತಿಳಿದುಬರುತ್ತದೆ. ಪಾಣಿನಿಯ 'ಪ್ರಜ್ಞಾದಿಭ್ಯಶ್ಚ' ಎಂಬ ಸೂತ್ರವನ್ನು (ಪಾಣಿನಿ, ಅಷ್ಟಾಧ್ಯಾಯಿ, V, 4, 38) ಅನುಸರಿಸಿ ಹೇಮಚಂದ್ರನು ಗಂಧರ್ವ ಶಬ್ದಕ್ಕೆ ಸ್ವಾರ್ಥದಲ್ಲಿ ಅಣ್ ಪ್ರತ್ಯಯದಿಂದ, ಆದಿವೃದ್ಧಿಯಿಂದ, ಅಲೋಪದಿಂದ ಗಾಂಧರ್ವದ ವ್ಯುತ್ಪತ್ತಿಯನ್ನು ಪಡೆದಿದ್ದಾನೆ. (ಹೇಮಚಂದ್ರ, ಶಬ್ದಾನುಶಾಸನ, VII, 2, 165). ಆದುದರಿಂದ ಗಂಧರ್ವರ ಶಾಸ್ತ್ರವೇ ಗಾಂಧರ್ವವೆಂದಾಯಿತು - ಪ್ರಜ್ಞನೇ ಪ್ರಾಜ್ಞನೆನ್ನುವ ಹಾಗೆ. ಹೇಮಚಂದ್ರನು ಗಾಂಧರ್ವವನ್ನು ಗಾನ, ಗೀತಿ, ಗೇಯಗಳ ಪರ್ಯಾಯವೆನ್ನುತ್ತಾನೆ. ಕ್ರಿ. ಶ. ಹತ್ತನೆಯ ಶತಮಾನದಲ್ಲಿದ್ದ ಕವಿ ರಾಜಶೇಖರ ರಚಿತ ಗ್ರಂಥ ಕಾವ್ಯಮೀಮಾಂಸೆಯಲ್ಲಿ ಗಂಧರ್ವವು ಭರತವರ್ಷದಲ್ಲಿರುವ ಒಂಭತ್ತು ಭಾಗಗಳಲ್ಲಿ ಒಂದು, ಎಂಬುದಾಗಿ ಉಲ್ಲೇಖಿಸಲ್ಪಟ್ಟಿದೆ. ಗಾಂಧರ್ವವೆನ್ನುವ ವಿವಾಹಪದ್ಧತಿಯೊಂದಿದ್ದರೂ ಅದು ಈ

No part of this publication is allowed for copying or reproducing. Copyright protected. Copyright infringement is punishable offence.

ಲಿಖನದ ವ್ಯಾಪ್ತಿಗೆ ಒಳಪಡದು. ಸರ್ ಮೋನಿಯರ್ ವಿಲಿಯಮ್ಸ್ ರವರ ಶಬ್ದಕೋಶದಲ್ಲಿ ವಿಸ್ತೃತವಾಗಿ ಗಂಧರ್ವ ಶಬ್ದದ ಅರ್ಥಗಳನ್ನು, ಅನ್ವಯಗಳನ್ನು ಕೊಟ್ಟಿದೆ. ಸಂಗೀತಶಾಸ್ತ್ರದಲ್ಲಿ ಮಾರ್ಗಸಂಗೀತ ದೇಶೀ ಸಂಗೀತಗಳೆರಡನ್ನೂ ಬಲ್ಲವನು ಗಾಂಧರ್ವ, ಮಾರ್ಗಸಂಗೀತವನ್ನು ಮಾತ್ರ ಬಲ್ಲವನು ಸ್ವರಾದಿ, ಕಂಠಧ್ವನಿಯನ್ನೇ ವಾದ್ಯವಾಗಿ ಉಳ್ಳವನು ಹಾಡುಗಾರ (ಗಾಯನ)ನೆಂದು ಹೇಳಿದೆ.

**ನಾಟ್ಯಶಾಸ್ತ್ರದಲ್ಲಿ ಗಾಂಧರ್ವ —**

ಭರತನು ನಾಟ್ಯವನ್ನು ವೇದವೆಂದೇ ಹೇಳಿ, ಗಾಂಧರ್ವವೇದವನ್ನು ಮೊದಲು ಹೇಳಿದ್ದು ನಾರದನೇ ಎಂದಿದ್ದಾನೆ. ಗಾಂಧರ್ವವೇದಕ್ಕೂ ನಾಟ್ಯವೇದಕ್ಕೂ ಒಂದು ವ್ಯತ್ಯಾಸವೆಂದರೆ ಉಪವೇದವಾದ ಗಾಂಧರ್ವವು ಅನೇಕ ಕಟ್ಟುಪಾಡುಗಳಿಗೂ ನಿಯಮಗಳಿಗೂ ಒಳಪಟ್ಟಿದ್ದರೆ ಪಂಚಮವೇದವಾದ ನಾಟ್ಯವು ಎಲ್ಲ ವರ್ಣಗಳಿಗೂ ಉಪಯುಕ್ತವಾಗುವಂತಹದು. ನಾಟ್ಯಕ್ಕೆ ಅವಶ್ಯವಾದ ಗಾಯನ - ನೃತ್ಯಗಳಿಗಾಗಿ ಗಾಂಧರ್ವವೇದವನ್ನು ಆಶ್ರಯಿಸಿದೆ. (ಕೃತುಮಾಲ್ಯಾಲಂಕಾರೈಃ ಪ್ರಿಯಜನಗಾಂಧರ್ವಕಾವ್ಯಸೇವಾಭಿಃ ।ಉಪವನಗಮನವಿಹಾರೈಃ ಶೃಂಗಾರರಸಃ ಸಮುದ್ಭವತಿ।। (ನಾ. ಶಾ. 6 - 47). ಶೃಂಗಾರರಸವು ಪುಷ್ಪಗಳಿಂದ ಗಾಂಧರ್ವದಿಂದ ಹಾಗೂ ಕಾವ್ಯಪಠಣದಿಂದ ಉದ್ದೀಪನವಾಗುತ್ತದೆಂದು ನಾಟ್ಯಶಾಸ್ತ್ರವು ಹೇಳುತ್ತದೆ. ಗಾಂಧರ್ವಮಿತಿಯನ್ನು 'ಸ್ವರತಾಲಪದಾಶ್ರಯಂ, ಅತ್ಯರ್ಥಮಿಷ್ಟಂ ದೇವಾನಾಂ ತಥಾ ಪ್ರೀತಿಕರಂ ಗಂಧರ್ವಾಣಾಂ ಚ ಯಸ್ಮಾದ್ದಿ ತಸ್ಮಾದ್ ಗಾಂಧರ್ವಮುಚ್ಯತೇ' ಎಂದು ಭರತನು ವರ್ಣಿಸಿದ್ದಾನೆ. ಸ್ವರ, ತಾಲ, ಪದ (ಶಬ್ದ) ಗಳ ಸಮೇತ ಬೇರೆ ವಾದ್ಯಗಳ ಜತೆಯಲ್ಲಿ ನುಡಿಸುವ ಸಂಗೀತಕ್ಕೆ ಗಾಂಧರ್ವ ಎನ್ನುವರು ; ದೇವತೆಗಳಿಗೆ ಅದು ಅತ್ಯಂತ ಪ್ರಿಯವಾದದ್ದು, ಶ್ರೇಯಸ್ಸನ್ನು ಎಂದರೆ ಪರಲೋಕದ ಹಿತವನ್ನು ತಪ್ಪದೆ ಕೊಡವಂತಹದು, ಗಂಧರ್ವರಿಗೆ ಅದರಿಂದ ಸಂತೋಷವಾಗುವುದು, ಅವರಿಂದಲೇ ಪ್ರಯುಕ್ತವಾಗಿದೆ, ಅದಕ್ಕಾಗಿ ಗಾಂಧರ್ವ ಎಂದು ಹೆಸರು ; ಕಂಠ, ವೀಣಾ, ಕೊಳಲು ಇವುಗಳಿಂದ ಇಲ್ಲಿ ಸ್ವರಗಳು ಹೊರಡುವುದು, ಸ್ವರದ ಗಾಂಧರ್ವ, ಕಾಲದ ಗಾಂಧರ್ವ ಮತ್ತು ಪದಗಳ ಗಾಂಧರ್ವ ಎಂದು ಗಾಂಧರ್ವದಲ್ಲಿ ಮೂರು ಪ್ರಕಾರಗಳು ಎಂದು ಉಲ್ಲೇಖಿಸಿ ಇವುಗಳ ವಿಧಗಳು ಹಾಗೂ ಅವುಗಳ ವಿವರಗಳನ್ನು ನೀಡಿದೆ. ಹೀಗೆ ಸ್ವರ - ತಾಲ - ಶಬ್ದಗಳ ಸಹಿತವಾದ ಗಾಂಧರ್ವದ ವಸ್ತುವಿಗೆ ಪದವೆಂದೂ, ಇದು ಅಕ್ಷರಗಳಿಂದ ಕೂಡಿರುವುದಾದ್ದರಿಂದಲೂ ಪದವೆಂದೂ, ಹೀಗೆ ಪದವೆನ್ನುವುದು ಗಾಂಧರ್ವದ ಮೂರು ವಿಧಗಳಲ್ಲಿ ಒಂದೆಂದೂ ಭರತಮುನಿಯ ಕಾಲದಿಂದ ಪ್ರಸಿದ್ಧವಾಗಿದ್ದು ಸಂಸ್ಕೃತವಾಙ್ಮಯದಲ್ಲಿ ಬಳಕೆಯಲ್ಲಿದ್ದಿದ್ದಿತು. ಆದರೆ ಪದವೆಂಬ ಪರಿಭಾಷೆಯು ಇಂದಿನ ಕೃತಿಯ ರೂಪಕ್ಕೆ ಮಾತೃಕೆ ಎಂಬ ಅರ್ಥದಲ್ಲಿ ರೂಢಿವಡೆದಿದ್ದು ಸುಮಾರು ಹದಿನೈದನೆಯ ಶತಮಾನದಲ್ಲಿ, ಕನ್ನಡನಾಡಿನಲ್ಲಿ.

ನಂದಿಕೇಶ್ವರನು, ಭರತಮುನಿಯು ಮಾನವರಿಗೆ ನಾಟ್ಯವೇದವನ್ನು ಪಸರಿಸಲು ಹೇಗೆ ಸಾಧನವಾದನು, ಎಂದು ವಿವರಿಸುತ್ತ ಭರತನು ತನ್ನ ಗಂಧರ್ವ - ಅಪ್ಸರೆಯರ ತಂಡದದೊಂದಿಗೆ ಶಿವ ಮತ್ತು ಪಾರ್ವತಿಯ ಎದುರು ನರ್ತಿಸಿದಾಗ ಸಂಪ್ರೀತಿಗೊಂಡು, ಸಂತಸದಿಂದ ತನ್ನ ತಾಂಡವ ನೃತ್ಯವನ್ನು ಸ್ಮರಿಸಿಕೊಂಡು ತನ್ನ ಗಣಗಳಿಗೆ ಭರತಮುನಿಗೆ ತಾಂಡವ ನೃತ್ಯವನ್ನು ಬೋಧಿಸಲು ಆಜ್ಞಾಪಿಸುತ್ತಾನೆ. ಭರತಮುನಿಯು ಭಟ್ಟತಂಡುವಿನ ಬಳಿ ಕಲಿತು ಭೂಲೋಕದಲ್ಲಿ ಅದು ಹರಡುವಂತೆ ಮಾಡುತ್ತಾನೆ. ಇದು ತಾಂಡವನೃತ್ಯವೆಂಬ ಹೆಸರಿನಲ್ಲಿ ಹೆಸರುವಾಸಿಯಾಯಿತು. ಪಾರ್ವತಿಯು ರಾಕ್ಷಸದೊರೆ ಬಾಣನ ಪುತ್ರಿ ಉಷೆಗೆ ಲಾಸ್ಯವನ್ನು ಹೇಳಿಕೊಟ್ಟಳೆಂದೂ, ಉಷೆಯು ಇದನ್ನು ದ್ವಾರಕೆಯ ಗೋಪಿಯರಿಗೆ ಬೋಧಿಸಿದಳೆಂದೂ, ಈ ಗೋಪಿಯರು ಲಾಸ್ಯವನ್ನು ಸೌರಾಷ್ಟ್ರದೇಶದ ಸ್ತ್ರೀಯರಿಗೆ ಬೋಧಿಸಿದಳೆಂದೂ. ಸೌರಾಷ್ಟ್ರ (ಸೂರತ್) ದವರು ಲಾಸ್ಯವನ್ನು ಲೋಕಕ್ಕೆಲ್ಲ ಅದು ಪಸರಿಸುವಂತೆ ಮಾಡಿದರೆಂದೂ ಹೇಳಿದ್ದಾನೆ.



Nandikeshwara — Nandi (mythology) - Wikipedia

No part of this publication is allowed for copying or reproducing. Copyright protected. Copyright infringement is punishable offence.

ಭರತನು ತನ್ನ ನಾಟ್ಯಶಾಸ್ತ್ರದ ಮೊದಲನೆಯ ಅಧ್ಯಾಯವಾದ ನಾಟ್ಯೋತ್ಪತ್ತಿಯಲ್ಲಿ ನಾಟ್ಯವೇದವನ್ನು ಪ್ರಯೋಗಿಸಲೂ, ಅದರಲ್ಲಿ ಶೃಂಗಾರರಸ ಪ್ರಯೋಗಕ್ಕೆ ಬೇಕಾದ ಕೈಶಿಕೀ ವೃತ್ತಿಯನ್ನು ಪ್ರಯೋಗಿಸಲೂ ಬ್ರಹ್ಮನು ತನಗೆ ಕೈಶಿಕೀವೃತ್ತಿಯಲ್ಲಿ ಚತುರರಾದ ಮಂಜುಕೇಶೀ, ಸುಕೇಶೀ, ಸೌದಾಮಿನೀ ಮುಂತಾದ 24 ಸ್ತ್ರೀಯರನ್ನು ಮಾನಸೀ ಸೃಷ್ಟಿಯಿಂದ ಹುಟ್ಟಿಸಿ ತನಗೆ ಕೊಟ್ಟನೆಂದೂ, ವಾದ್ಯ- ಮೇಳಕ್ಕೆ ಸ್ವಾತಿ, ಅವನ ಶಿಷ್ಯರು ಮತ್ತು ವಾದ್ಯಗಳು, ಹಾಗೂ ಗಾಯನಕ್ಕೆ ನಾರದ ಮತ್ತು ಗಂಧರ್ವರು ತನಗೆ ಒಪ್ಪಿಸಲ್ಪಟ್ಟರೆಂದೂ ಹೇಳುತ್ತಾನೆ. (42 - 51 ಶ್ಲೋ). ನಾಟ್ಯಶಾಸ್ತ್ರದ 14ನೆಯ ಅಧ್ಯಾಯವಾದ ಪ್ರವೃತ್ತಿ - ಧರ್ಮೀವ್ಯಂಜಕದಲ್ಲಿ ದೇವ-ದಾನವ ಮೊದಲಾದವರ ಕಕ್ಷ್ಯಾಪ್ರದೇಶಗಳನ್ನು ಹೇಳುವಾಗ ಗಂಧರ್ವರೂ ಎಲ್ಲ ಅಪ್ಸರೆಯರೂ ಇರುವುದು ಹೇಮಕೂಟದಲ್ಲಿ ಎಂದು ಉಲ್ಲೇಖಿಸಿದೆ. ಹೇಮಕೂಟವು ಹಿಮಾಲಯ ಪರ್ವತದ ಉತ್ತರಭಾಗದ ಪರ್ವತಶ್ರೇಣಿ. ಕರ್ನಾಟಕದ ಹಂಪಿಯ ಬಳಿ ಹೇಮಕೂಟವೆಂಬ ಬೆಟ್ಟವಿದ್ದರೂ ಇದಾಗದು. ಭರತನು ರಾಕ್ಷಸ, ಭೂತಗಣಗಣಗಳು ಹಿಮಾಲಯದಲ್ಲಿ, ಶೇಷ-ವಾಸುಕಿ - ತಕ್ಷ ಇವರು ನಿಷಧದಲ್ಲಿ, ಮೂವತ್ತಮೂರು ದೇವಗಣಗಳು ಮಹಾಮೇರುವಿನಲ್ಲಿ, ಸಿದ್ಧರೂ ಬ್ರಹ್ಮರ್ಷಿಗಳು ವೈಢೂರ್ಯಗಳಿಂದ ತುಂಬಿದ ನೀಲಪರ್ವತದಲ್ಲಿ, ದೈತ್ಯರೂ ದಾನವರೂ ಶ್ವೇತಪರ್ವತದಲ್ಲಿ. ಪಿತೃಗಳು ಶೃಂಗವಂತದಲ್ಲಿ - ಹೀಗೆ ದಿವ್ಯರ ವಾಸಸ್ಥಾನಗಳಾಗಿವೆ ಎಂದು ಹಿಮಾಲಯ ಪ್ರದೇಶಗಳನ್ನೇ ಹೇಳುತ್ತಾನೆ. ಹೇಮಕೂಟವು ಕೈಲಾಸದ ಇನ್ನೊಂದು ಹೆಸರಾಗಿದ್ದು ಜಂಬೂದ್ವೀಪದಲ್ಲಿ ಇರುವ ಸಪ್ತ ಪರ್ವತಗಳಲ್ಲಿ ಒಂದಾಗಿದೆ. ಈ ಪರ್ವತವು ಗುಪ್ತರ ಕಾಲದ ಶಾಸನಗಳಲ್ಲಿಯೂ ಉಲ್ಲೇಖಿಸಲ್ಪಟ್ಟಿದೆ. ಕೈಲಾಸಪರ್ವತವು ಮಾನಸ ಸರೋವರದ ಉತ್ತರದಲ್ಲಿ 25 ಮೈಲುಗಳ ದೂರದಲ್ಲಿದೆ. ಗಂಗ್ರೀ ಮತ್ತು ನಿತಿ ಪೂರ್ವದ ಕಣಿವೆ ಮಾರ್ಗವನ್ನು ದಾಟಿ ಇದೆ. ಇಳಾವರ್ತದ ದಕ್ಷಿಣದಲ್ಲಿದೆ. ಇದು ಕಿಂಪುರುಷರ ಪರ್ವತಗಡಿ. ಈ ಪರ್ವತದ ದಕ್ಷಿಣದಲ್ಲಿ ಪುಂಢ್ರನ ನಾಡಿತ್ತು.

#.. Kimpurusha, Kimpuruṣa, Kim-purusha, Kiṃpuruṣa: 20 definitions

Copyright Protected





River and river roads of Kinnaur



(This is the interesting carving of coupled Kinnara and Kinnari, hybrid creatures with a human upper body and legs and wings of a bird, which are believed to come from the Himalayas and often watch over the well-being of humans in times of trouble or danger. These mythical creatures are celestial in nature and closely associated with music. They were thought to play music for the gods in the heavenly realms. — from Facebook)

ಗಂಧರ್ವ ದೇಶವು ಪುರಾಣಗಳಲ್ಲಿ ಗಾಂಧರ್ವವೆಂದು ಉಲ್ಲೇಖಿಸಲ್ಪಟ್ಟು ಭಾರತವರ್ಷದ ಒಂಬತ್ತು ಭಾಗಗಳಲ್ಲಿ ಒಂದಾಗಿದೆ. ರಾಮಾಯಣದ ಉತ್ತರಕಾಂಡದ cxiii, 10-11 ಮತ್ತು cxiv 11 ರಲ್ಲಿ ಹೇಳಿರುವ ಗಾಂಧರ್ವವು ಕಾಬೂಲಿನ ಕಣಿವೆಯಾಗಿದ್ದು ಸಿಂಧು ನದಿಯ ಪೂರ್ವ ಭಾಗದ ಭೂಮಿಯಾಗಿದೆ (ನೋಡಿ. ಕನ್ನಿಂಗ್ಹಾಮ್ ರವರ ಎ. ಜಿ. ಟಿಪ್ಪಣಿಗಳು ಪು. 752)

ಭರತಮುನಿಯು “ನಾರದಾದ್ಯಾಶ್ಚ ಗಂಧರ್ವಾ ಗಾನಯೋಗೇ ನಿಯೋಜಿತಾಃ I” ಎಂದಿದ್ದಾನೆ.
ಗಾಂಧರ್ವಶಬ್ದಕ್ಕೆ ನಾಟ್ಯದ ಅಥವಾ ತೌರ್ಯತ್ರಿಕದ ಪರಿಭಾಷೆಯಲ್ಲಿ ಅನಮ್ಯಾರ್ಥವು ಬಹುಶಃ ಮೊದಲನೆಯ ಬಾರಿಗೆ ಸಿದ್ಧವಾದುದು ಭರತಮುನಿಯಿಂದಲೇ. ಆತನು ಬಳಸಿದುದನ್ನು ಎರಡು ರೀತಿಯ ಪ್ರಯೋಗಗಳಾಗಿ ವಿಂಗಡಿಸಬಹುದು. ಲೌಕಿಕ ಸಂದರ್ಭಗಳಲ್ಲಿ ಬಳಕೆಯಾಗುವ ಗೀತವಾದಿತ್ರಗಳಿಗೆ ಪರ್ಯಾಯವಾಗಿ ಒಂದು ರೀತಿಯಾದರೆ ವೈದಿಕ ಸಂದರ್ಭಗಳಲ್ಲಿ ಪ್ರಯುಕ್ತಿ ಮತ್ತೊಂದೆಂಬ ಅಭಿಪ್ರಾಯವನ್ನು ಹೊರಡಿಸುತ್ತ, ಈ ಎರಡನ್ನೂ ಭರತಮುನಿಯೇ ಹೇಳಿದ್ದೆಂದು ಅಭಿನವಗುಪ್ತನು ವ್ಯಾಖ್ಯಾನಿಸುತ್ತಾನೆ.
“ಇಹಾಯಂ ಗಾಂಧರ್ವಶಬ್ದೋ ಲೋಕೇ ಶಾಸ್ತ್ರೇ ಚ ದ್ವಿವಿಧೋ
ನಾಟಕಶಬ್ದವತ್ |ಸಾಮಾನ್ಯವಿಶೇಷಣಾಸ್ಯ ಪ್ರಯೋಗದರ್ಶನಾತ್” (ಅಭಿನವಗುಪ್ತ, ಅಭಿನವಭಾರತೀ, ಭರತ, XXXIII ,1ರ ಮೇಲಿನ ವ್ಯಾಖ್ಯಾನ.)
ಹಾಗೆಯೇ ಗಂಧರ್ವರು ಹಾಡಿದ್ದು ಗಾಂಧರ್ವ ಎಂದು ಹಿಂದೆಯೇ ಹೇಳಿದೆಯಷ್ಟೇ ಎನ್ನುತ್ತಾನೆ ಅಭಿನವಗುಪ್ತ.
“ಉಕ್ತಂ ಹಿ ಪ್ರಾಕ್ - ನಾರದಾದ್ಯಾಶ್ಚ ಗಂಧರ್ವಾ ಗಾನಯೋಗೇ ನಿಯೋಜಿತಾಃ ಇತಿ | ತಥಾ ಗಾನಶಬ್ದೇಽಪಿ ಗೀತಿಃ | ತತ್ರಾಶ್ರಯೇಣಾಸ್ತಿ ಸಾಮಾನ್ಯವಚನತಾ (ಅದೇ ಉಕ್ತಸ್ಥಾನ. ಭರತಮುನಿ ಉಕ್ತಗ್ರಂಥ,I.).

ಭರತಮುನಿಯು ತನ್ನ ನಾಟ್ಯಶಾಸ್ತ್ರದಲ್ಲಿ ರಂಗ-ದೈವತ-ಪೂಜೆಯನ್ನು ಮಾಡುವ ಸಮಯದಲ್ಲಿ ದೇವತೆಗಳಿಗೆ ಮಂತ್ರಗಳಿಂದ ಆಹ್ವಾನ, ಬಲಿದಾನದ ಸಮಯದಲ್ಲಿ ಅನೇಕ ದೇವಾನುದೇವತೆಗಳ, ದಿಕ್ಕುಗಳ, ಸಕಲ ಭೂತಗಳ, ಸಮುದ್ರಾದಿಗಳ, ಯಕ್ಷಗುಹ್ಯರ, ನಾಟ್ಯಮಾತೃಕೆಯರ, ಸ್ಕಂದ, ದಕ್ಷ ಹಾಗೂ ಬ್ರಹ್ಮರ್ಷಿಗಳಂತಹ ಸಕಲರೊಂದಿಗೆ ಗಂಧರ್ವರಿಗೂ ಪೂಜೆಯನ್ನು ಹೇಳಿದ್ದಾನೆ. ಇದರಲ್ಲಿ ಗಂಧರ್ವ - ಅಗ್ನಿ - ಸೂರ್ಯರಿಗೆ ಕೆಂಪುಬಣ್ಣದ ಪುಷ್ಪಗಂಧಗಳನ್ನು ಏರಿಸಬೇಕೆಂದೂ, ವಿಶ್ವೇ
ದೇವರು, ಗಂಧರ್ವರು, ಮುನಿಗಳು, ಇವರಿಗೆ ಮಧುಪಾಯಸವನ್ನು ಬಲಿ ಎಂದು ನಿವೇದನವನ್ನು ಮಾಡಿ ‘ದೇವದೇವಾ, ಮಹಾದೇವ ನಾನು ನಿವೇದಿಸುತ್ತಿರುವ ಈ ಮಂತ್ರಪೂತ ಬಲಿಯನ್ನು

No part of this publication is allowed for copying or reproducing. Copyright protected. Copyright infringement is punishable offence.

ಭಕ್ತಿಯಿಂದ ಕೊಡುತ್ತೇನೆ, ಸ್ವೀಕರಿಸು, ನಮ್ಮ ನಾಟ್ಯಕ್ಕೆ ಸಿದ್ಧಿಯನ್ನು ಕೊಡು' ಎಂದು ಮಂತ್ರಪೂತವಾಗಿ ಪೂಜಿಸಬೇಕೆಂದು ಹೇಳಿದ್ದಾನೆ. ಇವೇ ಶಬ್ದಗಳಲ್ಲಿ ಮಂತ್ರಗಳಿವೆ.

**ಬೃಹದ್ದೇಶಿಯಲ್ಲಿ ಗಾಂಧರ್ವ –**

ಮತಂಗಮುನಿಯು ತನ್ನ ಬೃಹದ್ದೇಶಿಯ ಪ್ರಾರಂಭದಲ್ಲಿ ದೇಶೀ ಮತ್ತು ಗಾಂಧರ್ವಗಳ ಅರ್ಥ ನಿರೂಪಣೆಯನ್ನು ಮಾಡುತ್ತಾನೆ. ತಂತ್ರಶಾಸ್ತ್ರೋಚಿತವಾದ ನಿರೂಪಣಾವಿಧಾನದಲ್ಲಿ ನಾದದಿಂದ ಗಾಂಧರ್ವ, ದೇಶೀಗಳು ಉತ್ತರೋತ್ತರ ಕ್ರಮದಲ್ಲಿ ಹೇಗೆ ವಿಕಾಸಗೊಂಡವು ಎಂಬುದಕ್ಕೆ (ಕಾರಣಬಿಂದು) - ಬಿಂದು - ನಾದ - ಮಾತ್ರಾ - ವರ್ಣ - ಸ್ವರ, ವ್ಯಂಜನ, ಗೇಯಸ್ವರ - ಪದ - ವಾಕ್ಯ - ಮಹಾವಾಕ್ಯ - ಸಾಂಗವಾದ ವೇದ - ಗಾಂಧರ್ವ ಎಂಬ ವಿಕಾಸ ಸರಣಿಯನ್ನು ಉಲ್ಲೇಖಿಸುತ್ತಾನೆ. ಕಿನ್ನರ, ಗಂಧರ್ವ, ನಾಗಕಿನ್ನರ, ವಿದ್ಯಾಧರ, ನಾಗಲೋಕ ಇತ್ಯಾದಿಗಳನ್ನು ಹೇಳಿ, ಈ ಅತಿಮಾನವವರ್ಗದವರಿಗೆ ಪ್ರಿಯವಾದ ಎಂದರೆ ಅವರು ಹಾಡಲು ಇಷ್ಟಪಡುವ ಗ್ರಾಮರಾಗ, ಭಾಷಾರಾಗಗಳನ್ನೂ ಹೇಳಿದ್ದಾನೆ. ಮತಂಗನು ಬೃಹದ್ದೇಶಿಯ ಆರನೆಯ ಅಧ್ಯಾಯವಾದ ಪ್ರಬಂಧಾಧ್ಯಾಯದಲ್ಲಿ ಪ್ರಬಂಧಗಳ ಲಕ್ಷಣಗಳನ್ನು ಹೇಳುತ್ತ, 1107 ನೆಯ ಶ್ಲೋಕದಲ್ಲಿ 'ಸ್ವರಗಳಿಂದಲೂ ಮುರಜವಾದ್ಯದಲ್ಲಿ ಹುಟ್ಟುವ ಪಾಟಾಕ್ಷರಗಳಿಂದಲೂ ಕರಣವೆಂಬ ತಾಳದಲ್ಲಿಯೂ ಗಂಧರ್ವರು ಯಾವುದನ್ನು ಹಾಡುತ್ತಾರೋ ಅದು ಬಂಧಕರಣವೆನ್ನಿಸಿಕೊಳ್ಳುತ್ತದೆ' ಎಂದು ಹೇಳುತ್ತಾನೆ. 1109 ನೆಯ ಶ್ಲೋಕದಲ್ಲಿ 'ಕೇವಲ ಪಾಟಗಳ ಅಕ್ಷರಗಳಿಂದಲೇ ಪೂರ್ತಿಯಾಗಿ ತಾಲಸಹಿತವಾಗಿ ಹಾಡುವಂತಹದನ್ನು ಗಂಧರ್ವ(ವಿದ್ಯಾ ವಿದ್ವಾಂಸರು) ಕೈವಾಟ ಎಂದು ತಿಳಿಯಬೇಕು' ಎಂದು ಹೇಳಿದ್ದಾನೆ. ಈ ಪ್ರಬಂಧಗಳು ಸ್ವಲ್ಪ ಮಾರ್ಪಟ್ಟು ಈಗ 'ತಿಲ್ಲಾನ' ಎಂಬ ಹೆಸರಿನಲ್ಲಿ ಪ್ರಚಲಿತವಿದೆ. ಅದೇ ಅಧ್ಯಾಯದಲ್ಲಿ ವರ್ಣೈಲಾಗಳ ಲಕ್ಷಣಗಳನ್ನು ಹೇಳುತ್ತ 1149 ನೆಯ ಶ್ಲೋಕದಲ್ಲಿ 'ಹನ್ನೊಂದರಿಂದ ಮೊದಲು ಮಾಡಿಕೊಂಡು ಹದಿನೇಳರ ಪೂರ್ತಿಯಾಗಿ ವರ್ಣಗಳನ್ನು ಕ್ರಮವಾಗಿ ಈ ಏಳರ ಪ್ರತಿಯೊಂದು ಪಾದದಲ್ಲಿಯೂ ಇರುವಂತೆ ಆಕರ್ಷಕವಾದ ಪದಗಳಿಂದಲೂ ಒಳ್ಳೆಯ ನಾದದಿಂದಲೂ ಗಂಧರ್ವ(ವಿದ್ಯಾವರಿಷ್ಠ) ರು ಜಗತ್ತಿನಲ್ಲಿ ಹಾಡುತ್ತಾರೆ,' ಎಂದು ಮದನವತೀ, ಶಶಿಲೇಖಾ ಮತ್ತು ಪ್ರಭಾವತೀ ವರ್ಣೈಲಾವನ್ನು ವಿವರಿಸಿ, 1152 ನೆಯ ಶ್ಲೋಕದಲ್ಲಿ 'ಲಲಿತಾ (ವರ್ಣೈಲಾ) ವನ್ನು ಆಕರ್ಷಕವಾದ ( ಪ್ರತಿಯೊಂದು ಪಾದದಲ್ಲಿಯೂ ಹದಿನೈದು) ವರ್ಣಗಳಿರಬೇಕೆಂಬ ನಿಯಮದಿಂದಲೂ ಮೊದಲನೆಯ (ವರ್ಣೈಲಾ) ದಲ್ಲಿರುವ ಹಾಗೆ ಮೊದಲಿನ ಎರಡು ಚರಣಗಳನ್ನು ಗಮಕಸಹಿತವಾಗಿಯೂ ಬಿಂದುಮೂರ್ಛನಾ ಸಮೇತವಾಗಿಯೂ ಗಂಧರ್ವ (ವಿದ್ಯಾಪಾರಂಗತ) ರು ಹಾಡಬೇಕು' ಎಂದು ಹೇಳುತ್ತಾನೆ.

**ಸಂಗೀತರತ್ನಾಕರ, ಸಂಗೀತರಸಕಲಿಕಾ ಹಾಗೂ ಸಂಗೀತಶಿರೋಮಣಿ (= ಪಂಡಿತಮಂಡಲಿ) ಯಲ್ಲಿ ಗಾಂಧರ್ವ –**

ಭರತ, ದತ್ತಿಲ, ವಿಶಾಖಿಲ, ಮತಂಗ ಮತ್ತು ಅಭಿನವಗುಪ್ತರನ್ನು ಬಿಟ್ಟರೆ ಕಾಲಾನುಕ್ರಮದಲ್ಲಿ ಗಾಂಧರ್ವದ ಅರ್ಥವನ್ನು ಬಿಡಿಸುವುದರಲ್ಲಿ ಶಾರ್ಙ್ಗದೇವನೇ ಅನಂತರದವನು. ಆತನು ಇವರೆಲ್ಲರ ಅಭಿಪ್ರಾಯಗಳನ್ನು ನಿರ್ದುಷ್ಟವೂ, ನಿರ್ದಿಷ್ಟವೂ ಆಗಿರುವ ರೀತಿಯಲ್ಲಿ ಹೇಳಿದ್ದಾನೆ. (ಸಂಗೀತರತ್ನಾಕರ IV, 1-4). ಮಾರ್ಗ ಹಾಗೂ ಗಾಂಧರ್ವ ಸಂಗೀತವನ್ನು ಶಾರ್ಙ್ಗದೇವನು ಶುದ್ಧಸಂಗೀತವೆಂದು ಕರೆದಿದ್ದಾನೆ. ನಿಯಮಗಳನ್ನು ಮಾರ್ಗ ಮತ್ತು ಗಾಂಧರ್ವ ಸಂಗೀತಗಳಲ್ಲಿ ಕಟ್ಟುನಿಟ್ಟಾಗಿ ಪಾಲಿಸಬೇಕೆಂದೂ ಹೇಳಿದ್ದಾನೆ. ರಂಜಕವಾದ ಸ್ವರಸಂದರ್ಭವೆಲ್ಲ ಗೀತ. ಅದು ಗಾಂಧರ್ವ, ಗಾನವೆಂದು ಎರಡು ವಿಧ. ಗಾನವೆಂದರೆ ಧಾತುಮಾತುಗಳನ್ನು ಶಾಸ್ತ್ರೋಕ್ತ ಲಕ್ಷಣಗಳಿಂದ ಕೂಡಿ ದೇಶೀ ರಾಗ ಮೊದಲಾದುವುಗಳಲ್ಲಿ ಬಲ್ಲವರಿಂದ ರಚಿತವಾದದ್ದೆಂದು ಶಾರ್ಙ್ಗದೇವನು ಹೇಳಿದ್ದಾನೆ.

ಮೋಕ್ಷದೇವನು ತನ್ನ ಸಂಗೀತರಸಕಲಿಕಾದಲ್ಲಿ, ಗಂಧರ್ವರು ಶಿವತತ್ಪರರು, ಮಾನವರಚಿತವಾದ ಅಥವಾ ನರಸ್ತುತಿಪರವಾದ ಹಾಡುಗಳನ್ನು ಅವರು ಹಾಡುವುದಿಲ್ಲ, ಮಂತ್ರಗೀತಗಳನ್ನು ಹಾಡುವುದರಲ್ಲಿಯೆ ನಿರತರಾಗಿರುತ್ತಾರೆ ಅವರ ಅಭ್ಯುದಯಕ್ಕಾಗಿ ಶಂಭುವಿನ ಸನ್ನಿಧಿಯಲ್ಲಿ ಸದಾ ಹಾಡುವ ಜಾತಿ (ಮತ್ತು ಕಂಬಲ, ಕಪಾಲ, ಬ್ರಹ್ಮಗೀತಿ, ಪ್ರಕರಣ ಗೀತಿ) ಮೊದಲಾದುವಕ್ಕೆ ಗಾಂಧರ್ವವೆಂದು ಹೆಸರು, ಎಂದು ಹೇಳಿದ್ದಾನೆ. (ಉಕ್ತಗ್ರಂಥ. ಉದ್ಧೃತಿ, ಭರತಕೋಶ, ಪು. 827).

No part of this publication is allowed for copying or reproducing. Copyright protected. Copyright infringement is punishable offence.

ಸಂಗೀತಶಿರೋಮಣಿಯು ಕ್ರಿ. ಶ. 15 (ಕ್ರಿ.ಶ.1429) ನೆಯ ಶತಮಾನದಲ್ಲಿ ಅಲಹಾಬಾದ್ ಹತ್ತಿರದಲ್ಲಿ ಕಡಾ ಎಂಬ ತನ್ನ ರಾಜಧಾನಿಯಲ್ಲಿ ಹಿಂದೂ ಪರಿವರ್ತನೆಯಿಂದ ಮುಸ್ಲಿಮನಾದ ಮಲಿಕ್ ಶಾಹಿ ಸುಲ್ತಾನನು ಏರ್ಪಡಿಸಿದ ಸಂಗೀತಸಮ್ಮೇಳನದಲ್ಲಿ, ಸಂಗೀತ ಲಕ್ಷ್ಯ - ಲಕ್ಷಣಗಳ ವಿದ್ವಾಂಸರು ಸೇರಿ ಚರ್ಚಿಸಿ ಕೈಗೊಂಡ ತೀರ್ಮಾನಗಳ ಗ್ರಂಥ. ಸಂಗೀತಶಿರೋಮಣಿಯಲ್ಲಿ ಗಂಧರ್ವರು ಇಂದಿನವರೆಗೂ ತಮ್ಮ ಪರಂಪರೆ ಸಂಪ್ರದಾಯಗಳನ್ನು ನಿಷ್ಠರಾಗಿ ಮುಂದುವರೆಸಿಕೊಂಡು ಬಂದಿದ್ದಾರೆ ಎಂದೂ ಪ್ರಕರಣಗೀತಿಗಳಂತಹವೂ ಗ್ರಾಮರಾಗಗಳೂ ಗಾಂಧರ್ವವೆಂದೂ ಉಲ್ಲೇಖಿಸಿದೆ. ಈ ಉಲ್ಲೇಖವು ಗ್ರಂಥರಚನೆಯಾದ ಕಾಲದಲ್ಲಿ ಗಂಧರ್ವ ಜನಾಂಗದವರು ಇದ್ದರೆಂದೂ ಅವರ ಕುಲವಿದ್ಯೆಯಾದ ಸಂಗೀತವನ್ನು ಉಳಿಸಿಕೊಂಡಿದ್ದರೆಂಬುದಕ್ಕೂ ಸಾಕ್ಷಿಯಾಗಿದೆ. ಕೈಶಿಕೀ ಎಂಬ ಭಾಷಾರಾಗವು ಪ್ರಾಚೀನ ಗಾಂಧರ್ವ ಸಂಗೀತದ ಪರಿಮಿತಿಯಲ್ಲಿ ಬರುತ್ತದೆ.

ಹೀಗೆ ಗಂಧರ್ವರಿಂದಲೇ ಗಾಂಧರ್ವ ಎಂಬ ಮಾತನ್ನು ಭರತ, ದತ್ತಿಲ, ವಿಶಾಖಿಲ, ಮತಂಗ, ಹೇಮಚಂದ್ರ, ಅಭಿನವಗುಪ್ತ, ಶಾರ್ಙ್ಗದೇವ, ಮೋಕ್ಷದೇವ ಇತ್ಯಾದಿ ಅನೇಕ ಶಾಸ್ತ್ರಕಾರರು ಹೇಳಿ, ವೇದದಿಂದ ಗಾಂಧರ್ವ, ಅದು ವೇದದಲ್ಲಿ ವಿಧಿಸಿರುವ ಸಾಧನೆಗಳಿಗೆ ಉಪಕಾರಕ, ಗಾಂಧರ್ವ ಶಾಸ್ತ್ರವೆಂದರೆ ವೇದಾಭ್ಯಾಸವೇ. ಗಂಧರ್ವರು ಶಿವತತ್ಪರರು, ಮಾನವರಚಿತವಾದ ಅಥವಾ ನರಸ್ತುತಿಪರವಾದ ಹಾಡುಗಳನ್ನು ಅವರು ಹಾಡುವುದಿಲ್ಲ ಮಂತ್ರಗೀತಗಳನ್ನು ಹಾಡುವುದರಲ್ಲಿಯೆ ನಿರತರಾಗಿರುತ್ತಾರೆ, ಎಂಬಿವೇ ಇತ್ಯಾದಿಯಾಗಿಯೂ ಹೇಳಿದ್ದಾರೆ. ಗಂಧರ್ವ ಜನಾಂಗದ ಬಗ್ಗೆ ಇದ್ದ ಈ ರೀತಿಯಾದ ಪೂಜನೀಯ ಭಾವವೂ, ಪುರಾಣಗಳಲ್ಲಿ ಹೇಳಿದ ಗಂಧರ್ವರೆಂದರೆ ದಿವ್ಯಜನರೆಂಬ ಇತ್ತೀಚಿನ 200 - 250 ವರ್ಷಗಳ ಹಿಂದಿನವರೆಗೂ ಇದ್ದ ನಂಬಿಕೆಗಳು ನಾಶವಾಗಿ ಪ್ರಸ್ತುತ ಭಾರತದಲ್ಲಿ ಈ ಜನಾಂಗವು ದಲಿತರೆಂಬ ಹೀನ ಪದವಿಯನ್ನು ಪಡೆದದ್ದು ಹೇಗೆಂಬುದರ ಬಗ್ಗೆ ವಿದ್ವಾಂಸರು ಸಂಶೋಧನೆಗಳನ್ನು ನಡೆಸಬೇಕಾಗಿದೆ. ಇದನ್ನು ಮುಂದೆ ಪ್ರಸ್ತಾಪಿಸಲಾಗಿದೆ.

ವೇದಸೂರಿಯು ತನ್ನ ಸಂಗೀತಮಕರಂದದ ನೃತ್ಯಾಧ್ಯಾಯದಲ್ಲಿ ಪುಷ್ಪಾಂಜಲಿ ನೃತ್ಯ ಲಕ್ಷಣಗಳನ್ನು ವಿವರಿಸುವ ಸಂದರ್ಭದಲ್ಲಿ (ಶ್ಲೋ. 67-82) ತಾಂಡವನೃತ್ಯವೆಂಬುದು ಉದ್ಧತವಾಗಿ (ಶಕ್ತಿಯುತವಾಗಿ) ನರ್ತಿಸುವ ಅನೇಕ ನೃತ್ಯಗಳಿಗೆ ( मार्गदेशीवभिागेन मार्गशब्देन ताण्डवम् ।। 80।। यदुद्धुतप्रयोगं तु तांडवं ववििधं मतम्।) ಹೆಸರು ಎಂದು ಹೇಳಿದ್ದಾನೆ. ಇದರಲ್ಲಿ ಮೇಲಾಪಕವನ್ನು (ಆರಂಭದ ನೃತ್ಯ ಭಾಗ) ಮಾಡಲು ಲಕ್ಷ್ಯಸುಂದರವಾದ ರಚನೆಗಳಿವೆಯೆಂದೂ ಹೇಳಿ. ಇದರಲ್ಲಿ ದೇವನಾದ ಶಿವನ ಸಂಧ್ಯಾ ತಾಂಡವದ ಸಮಯದಲ್ಲಿ ಬ್ರಹ್ಮನು ತಾಳವನ್ನೂ, ಮಹಾವಿಷ್ಣುವು ಪಟಹವನ್ನೂ (ಮೃದಂಗದಂತಹ, ಅದಕ್ಕಿಂತಲೂ ದೊಡ್ಡದಾದ ವಾದ್ಯ) ಶಾರದೆಯು ವೀಣೆಯನ್ನೂ ಬಾಜಿಸಿದರು. ನಂದಿಯು ಮೃದಂಗವಾದನದಲ್ಲಿ ತನ್ನ ಚಾತುರ್ಯವನ್ನು ತೋರಿದನು, ನಾರದನು ಗಾಯನವನ್ನು ಮಾಡಿದನು, ತುಂಬುರುವು ಶ್ರುತಿಯನ್ನು ನುಡಿಸಿದನು, ಕಿನ್ನರರು ಈ ವೃಂದಕ್ಕೆ ಸೇರಿದರು, ಇವಿಷ್ಟೂ ತಾಂಡವದ್ದಾದರೆ ; ಶೃಂಗಾರರಸವನ್ನು ಹುಟ್ಟಿಸುವ ಲಾಸ್ಯವೆಂಬ ಸುಕುಮಾರ ಪ್ರಯೋಗದಲ್ಲಿ ಪಾರ್ವತಿಯ ನೃತ್ಯವು ಹೀಗಿದೆ : 'ಸಂಜೆಯ ಸಂಧ್ಯಾಕಾಲದಲ್ಲಿ ಹಿಮಾಲಯದ ಗುಹೆಯಲ್ಲಿ ದೇವನಾದ ಶಿವನ ಅಧ್ಯಕ್ಷತೆಯಲ್ಲಿ ಶಾರದೆ, ಬ್ರಹ್ಮ ಮುಂತಾದ ದೇವತೆಗಳು ನೆರೆದಿರುವ ಸಭಾಸದಸ್ಸಿನಲ್ಲಿ ಗಂಧರ್ವ ಕನ್ಯೆಯರೂ ಅಪ್ಸರೆಯರೂ ಮೇಲಾಪಕವನ್ನು ನರ್ತಿಸಿದರು, ಅನಂತರ ಲಾಸ್ಯವನ್ನು ಪ್ರಯೋಗಿಸಿದರು' — ಎಂದು ವರ್ಣಿಸಿದ್ದಾನೆ.



Gandharva and Apsara Kanya.

No part of this publication is allowed for copying or reproducing. Copyright protected. Copyright infringement is punishable offence.

ನೂಪುರ ಭ್ರಮರಿ–ನೃತ್ಯಸಂಶೋಧನ ನಿಯತಕಾಲಿಕೆ (2321– 2519 ISSN NO)
ಸಂಚಿಕೆ 2; ಸಂಪುಟ 15 2021 ; ಅಂಕಣ- ಭರತಕೌತುಕ


## ರಾಮಾಯಣದಲ್ಲಿ ಗಂಧರ್ವ ಸಂಗೀತ ಶ್ರೇಷ್ಠರು —

ಅತಿ ಪ್ರಾಚೀನದಿಂದಲೇ ಗಂಧರ್ವರೆಂದರೆ ಗಾಯಕ ಜನಾಂಗದವರೆಂದೇ ಪ್ರಸಿದ್ಧ. ಐತಿಹಾಸಿಕ ಹಾಗೂ ಮಹಾಕಾವ್ಯಗಳಾದ ರಾಮಾಯಣ ಮಹಾಭಾರತಗಳು ಹಾಗೂ ಪುರಾಣಗಳಲ್ಲಿ ಗಂಧರ್ವರು ಕ್ಷತ್ರಿಯರನ್ನೂ ಸೋಲಿಸಬಲ್ಲ ವೀರಯೋಧರೆಂದೂ ಹಾಗೆಯೇ ತೌರ್ಯತ್ರಿಕ ಕಲೆಗಳಲ್ಲಿ ನುರಿತವರೆಂದೂ ವರ್ಣಿಸಲ್ಪಟ್ಟಿದೆ. ರಾಮಾಯಣದಲ್ಲಿ ಕೆಲವು ಗಂಧರ್ವ ಜನಾಂಗದವರು ದೇವ ಹಾಗೂ ಯಕ್ಷ ಜನಾಂಗದೊಂದಿಗೂ ಸ್ನೇಹವಿದ್ದವರು. ರಾಮಾಯಣದಲ್ಲಿ ಕೇಕಯ ರಾಜ್ಯದ ಗುರುಗಳಾದ ಗರ್ಗರಿಂದ ಗಾಂಧಾರದ ಮೇಲೆ 30 ದಶಲಕ್ಷ ಗಂಧರ್ವರಿಂದಾದ ದುರಾಕ್ರಮಣದಿಂದ ವಿಷಯವನ್ನು ತಿಳಿದು ಕೋಪಗೊಂಡ ರಾಮನು ಸೈನ್ಯಸಮೇತನಾಗಿ ಭರತನನ್ನು ದಿಗ್ವಿಜಯಕ್ಕಾಗಿ ಕಳುಹಿಸುತ್ತಾನೆ. ಭರತನು ತನ್ನ ಪುತ್ರರಾದ ಪುಷ್ಕಲ ಹಾಗೂ ತಕ್ಷರೊಡಗೂಡಿ ಯುದ್ಧವನ್ನು ಮಾಡಿ ವೀರ ಗಂಧರ್ವರನ್ನು ಸಂವರ್ತವೆಂಬ ಆಯುಧದ ಬಲದಿಂದ ಸೋಲಿಸುತ್ತಾನೆ. ಸಿಂಧೂ ನದಿಯ ಇಕ್ಕೆಲಗಳಲ್ಲಿ ಗಂಧರ್ವರ ರಾಜ್ಯವಾಗಿದ್ದ, ಗೆಲ್ಲಬೇಕಾಗಿದ್ದ ಈ ಅವಳಿ ಪಟ್ಟಣಗಳಿಗೆ ರಾಮನು ಯುದ್ಧದ ಮೊದಲೇ ಆ ಸಹೋದರರನ್ನು ರಾಜರನ್ನಾಗಿ ನಿಯಮಿಸುತ್ತಾನೆ! ಭರತನು ಐದು ವರ್ಷಗಳ ಕಾಲ ಗಾಂಧಾರದಲ್ಲಿಯೆ ನೆಲೆಸಿ ಸಿಂಧುನದಿಯ ಇಕ್ಕೆಲಗಳಲ್ಲಿ ಗಂಧರ್ವರ ರಾಜ್ಯವಾಗಿದ್ದ ಈ ಭಾಗಗಳನ್ನು ವಿಜಯದ ಸಲುವಾಗಿ ತನ್ನ ಮಕ್ಕಳ ಹೆಸರಿನಲ್ಲಿ ತಕ್ಷಶಿಲಾ ಹಾಗೂ ಪುಷ್ಕಲಾವತ್ತಗಳೆಂಬ ಎರಡು ಪ್ರಮುಖ ಪಟ್ಟಣಗಳನ್ನಾಗಿ ರಚಿಸಿ ತನ್ನ ಪುತ್ರರನ್ನು ರಾಜರನ್ನಾಗಿ ಮಾಡಿ ರಾಮನಲ್ಲಿಗೆ ಹಿಂದಿರುಗುತ್ತಾನೆ. ಕಾಲಿದಾಸಕವಿಯೂ ತನ್ನ ರಘುವಂಶದಲ್ಲಿ ಈ ಸಂದರ್ಭವನ್ನು ಚಿಕ್ಕದಾಗಿಯಾದರೂ ಕಾವ್ಯಮಯವಾಗಿ ವರ್ಣಿಸಿದ್ದಾನೆ. ತಕ್ಷಶಿಲೆಯು ಪ್ರಾಚೀನ ಪ್ರಸಿದ್ಧವಾದ ವಿಶ್ವವಿದ್ಯಾಲಯವಾದರೆ ಪುಷ್ಕಲಾವತ್ತವು ಪ್ರಾಚೀನದಲ್ಲಿ ಗಾಂಧಾರವೆಂದು ಪ್ರಸಿದ್ಧವಾಗಿದ್ದ ಈಗಿನ ಪೆಷಾವರವೆಂಬ ಪ್ರದೇಶವೆಂದು ವಿದ್ವಾಂಸರು ಅನುಮಿತಿಯನ್ನು ಹೊರಡಿಸುತ್ತಾರೆ. ಮಹಾಭಾರತದಲ್ಲಿ ಜನಮೇಜಯರಾಜನು ಇದೇ ಸ್ಥಳವನ್ನು ಗೆದ್ದು ವಶಪಡಿಸಿಕೊಂಡು ಸರ್ಪಯಜ್ಞವನ್ನು ಆಚರಿಸಿದ ಸ್ಥಳವೆಂದು ಸಂಶೋಧಕರು ಹೇಳುತ್ತಾರೆ. ಗಂಧರ್ವರು ದೇವಜನಾಂಗದ ಪ್ರಾಂತ್ಯಕ್ಕೆ ಸಮೀಪವಾದ ಕೈಲಾಸ ಪರ್ವತದ ಉತ್ತರದ ನಾಡಿನಲ್ಲಿ ಜೀವಿಸಿದ್ದವರು, ಅನಂತರದ ಕಾಲದಲ್ಲಿ ಬಹುಶಃ ಅವರು ಸರಸ್ವತಿ ನದಿಯ ತಪ್ಪಲಿಗೆ ವಲಸೆ ಬಂದವರಿರಬಹುದೆಂದು ಬಲರಾಮನು ಹೇಳುತ್ತಾನೆ.

ಮಾರ್ಗ ಸಂಗೀತವೆನ್ನುವುದಕ್ಕೆ ರಾಮಾಯಣದ ಕಾಲದಲ್ಲಿ ಗಾಂಧರ್ವವೆಂಬ ಪರಿಭಾಷೆಯಿತ್ತು. ಈ ಮಾರ್ಗಸಂಗೀತವು ಬಹು ಪವಿತ್ರವೆಂದೂ ಪುರಾತನವೂ ಎಂಬ ನಂಬಿಕೆಯು ನಮ್ಮಲ್ಲಿ ಬಹು ಹಿಂದಿನ ಕಾಲದಿಂದಲೂ ಇದೆ ಎಂದು ಈಗಾಗಲೇ ಹೇಳಿದೆ. ವಾಲಿಯನ್ನು ವಧಿಸಲೆಂದು ರಾಮನು ಸುಗ್ರೀವನೊಡಗೂಡಿ ಋಷ್ಯಮೂಕದಿಂದ ಕಿಷ್ಕಿಂಧೆಗೆ ಬರುತ್ತಿರುವಾಗ ಸಿಕ್ಕ ಋಷ್ಯಾಶ್ರಮವೊಂದರಲ್ಲಿ ಗಿಡಮರಗಳೂ ಬಾಳೆಯ ಗಿಡಗಳೂ ದಟ್ಟವಾಗಿ ಬೆಳೆದುಕೊಂಡಿದ್ದು ಅಲ್ಲಿದ್ದ ಆಶ್ರಮದಿಂದ ಸದಾಕಾಲವೂ ಸುಗಂಧವು ಹೊರಡುತ್ತಿದ್ದು ಅದು ಯಾವಾಗಲೂ ಗಂಧರ್ವ, ಅಪ್ಸರೆ, ಕಿನ್ನರರ ವಿಹಾರಸ್ಥಾನವಾಗಿತ್ತು. ಆದುದರಿಂದ ಆ ಆಶ್ರಮದಿಂದ ಎಡೆಬಿಡದೆ ಕರ್ಣಮನೋಹರವಾದ ವಾದ್ಯಘೋಷವೂ ಅವ್ಯಕ್ತಮಧುರವಾದ ಅಕ್ಷರಗಳಿದ್ದ ಗಾನವೂ ಕೇಳಿಸುತ್ತಿತ್ತು. ಕುಶೀಲವರು ರಾಮನ ಮುಂದೆ ರಾಮಾಯಣವನ್ನು ಹಾಡಿದರೆಂದೂ, ರಾಮನು ಭೂಮಿಯಲ್ಲೆಲ್ಲ ಗಾಂಧರ್ವ ಶ್ರೇಷ್ಠನೆಂದೂ ರಾಮಾಯಣದಲ್ಲಿ ಹೇಳಿದೆ. 'ಗಾಂಧರ್ವೇ ಚ ಭುವಿ ಶ್ರೇಷ್ಠಃ' ( ವಾಲ್ಮೀಕಿ ರಾಮಾಯಣ II, 2. 35). ಕುಶೀಲವರು ಅವನಿಗೆ ಕಡಿಮೆಯೇನಲ್ಲ. ಅವರು ಮಾರ್ಗಸಂಗೀತ ವಿಧಾನದಲ್ಲಿ ಸಂಪನ್ನರು. ಗಂಧರ್ವತತ್ವಜ್ಞರು. ಮೂರ್ಛನಾಕೋವಿದರು, ತಂತ್ರೀಲಯ ಸಮನ್ವಿತರಾದ ಗಾಯಕರು, ಗಂಧರ್ವರಂತೆ ರೂಪಲಕ್ಷಣ ಸಂಪನ್ನರು, ಸ್ವರ ಸಂಪನ್ನರು. ಅವರ ಗಾಯನವು ಮಧುರವಾಗಿಯೂ ರಕ್ತಿಸಂಪೂರ್ಣವಾಗಿಯೂ ಇದ್ದು, ಮಾರ್ಗ ಸಂಗೀತದಲ್ಲಿ ಹೇಳಿದ ಏಳು ಶುದ್ಧ ಜಾತಿಗಳಲ್ಲಿಯೂ ಮೂರು ಲಯಗಳಲ್ಲಿಯೂ ಮೂರು ಸ್ಥಾಯಿಗಳಲ್ಲಿಯೂ ರಚಿತವಾಗಿತ್ತು.

No part of this publication is allowed for copying or reproducing. Copyright protected. Copyright infringement is punishable offence.

**ನೂಪುರ ಭ್ರಮರಿ–ನೃತ್ಯಸಂಶೋಧನ ನಿಯತಕಾಲಿಕೆ (2321– 2519 ISSN NO)**
**ಸಂಚಿಕೆ 2; ಸಂಪುಟ 15 2021 ; ಅಂಕಣ- ಭರತಕೌತುಕ**



ಕುಶಲವರು ಶತ್ರುಘ್ನನ ಎದುರು ಗಾಯನ ಮಾಡುತ್ತಿರುವುದು.

**<u>ವೇದ - ಪುರಾಣಗಳಲ್ಲಿ ಗಂಧರ್ವರು</u> —**

ಗಂಧರ್ವರ ಉಲ್ಲೇಖವು ಮೊದಲಬಾರಿಗೆ ವೇದಸಂಹಿತೆ, ಬ್ರಾಹ್ಮಣ ಮತ್ತು ಉಪನಿಷತ್ತುಗಳಲ್ಲಿ ಕಂಡುಬರುತ್ತದೆ ಹಾಗೂ ಇತಿಹಾಸಗಳಲ್ಲಿ ಮುಂದುವರಿದಿದೆ. ಪುರಾಣಗಳಲ್ಲಿ ಗಂಧರ್ವರೆಂದರೆ ಹಾಡಿನುಡಿಸುವಂತಹ ಅತಿಮಾನುಷ ಅಥವಾ ಅರ್ಧದೇವತಾಸ್ವರೂಪಿಗಳೆಂದೂ ಅಪ್ಸರೆಯರೆಂದರೆ ಅತಿಶಯರೂಪಲಾವಣ್ಯಸಂಪನ್ನೆಯರಾದ ನರ್ತನಕುಶಲರಾದ ದಿವ್ಯಸ್ತ್ರೀಯರೆಂದೂ ಅರ್ಥವು ಬೆಳೆದುಬಂದಿದ್ದು, ಪ್ರಾಸಂಗಿಕವಾದರೂ ಗಂಧರ್ವರ, ಅಪ್ಸರೆಯರ ಗಾಯನವಾದನನರ್ತನಗಳ ಉಲ್ಲೇಖಗಳಿಲ್ಲದ ಪುರಾಣಗಳು ಇಲ್ಲವೆಂದೇ ಹೇಳಬೇಕು. ಅದರಲ್ಲಿ ಮುಖ್ಯವಾದವು ಅಗ್ನಿ, ವಾಯು, ಮತ್ಸ್ಯ, ಮಾರ್ಕಂಡೇಯ, ಪಾದ್ಮ, ಭಾಗವತ, ದೇವೀ ಮುಂತಾದ ಪುರಾಣಗಳು. ವಾಯುಮಹಾಪುರಾಣದಲ್ಲಿ ಇಪ್ಪತ್ತನಾಲ್ಕನೆಯ ಅಧ್ಯಾಯಕ್ಕೆ ವೈವಸ್ವತಮನುವಂಶಗಾಂಧರ್ವಮೂರ್ಛನಾಲಕ್ಷಣಕಥನವೆಂದೇ ಹೆಸರು. ಅದರ ಮೊದಲನೆಯ 34 ಶ್ಲೋಕಗಳಲ್ಲಿ ವೈವಸ್ವತ ಮನುವಂಶದ ಇತಿಹಾಸವನ್ನು ಹೇಳಿ ಉಳಿದ 32 ಶ್ಲೋಕಗಳಲ್ಲಿ ಗಾಂಧರ್ವವಿದ್ಯೆಯನ್ನು ವಿವರವಾಗಿ ಹೇಳಿದೆ. ಆದರೆ ಇಲ್ಲಿ ಹೇಳಿರುವುದು ಸಂಗೀತಶಾಸ್ತ್ರಗ್ರಂಥಗಳಲ್ಲಿ ಹೇಳಿರುವುದಕ್ಕಿಂತ ಭಿನ್ನವಾಗಿದೆ. ಬೌಧಾಯನಶ್ರೌತಸೂತ್ರದಲ್ಲಿ ಅಗ್ನಿವೇಶ್ಯನೆಂಬ ಒಬ್ಬ ಗಂಧರ್ವನ ಉಲ್ಲೇಖವಿದೆ. ಈತನು ಪಾಂಚಾಲ (ಪಂಜಾಬ್) ದೇಶದವನು. ಪುರಾಣಗಳಲ್ಲಿ ಗಂಧರ್ವರು ದೇವತೆಗಳಿಗಿಂತಲೂ ಸ್ವಲ್ಪ ಕಡಿಮೆ ಶಕ್ತಿಯನ್ನುಳ್ಳವರು. ದೇವತೆಗಳದು ಸ್ವರ್ಗಲೋಕವಾದರೆ ಇವರದು ಗಂಧರ್ವಲೋಕ. ಕೆಲವು ಪ್ರಾಚೀನ ಸಾಹಿತ್ಯಗಳಲ್ಲಿ ಗತು ಮತ್ತು ಪುಲಕರೆಂದು ಕರೆಯಲ್ಪಟ್ಟ ಇವರ ಜನ್ಮದಾತರು ಬ್ರಹ್ಮನ ಪುತ್ರನಾದ ಕಶ್ಯಪ ಮುನಿ ಮತ್ತು ದಕ್ಷನ ಪುತ್ರಿ ಅರಿಷ್ಟಾ ಎಂದು ಉಲ್ಲೇಖವಾದರೆ, ಇನ್ನೂ ಕೆಲವಲ್ಲಿ ಪ್ರದಾ ಎನ್ನುವವಳ ಉಲ್ಲೇಖವನ್ನು ನೀಡುತ್ತದೆ. ಈ ಗಂಧರ್ವರು ಗೀತವಾದನನರ್ತನಗಳಲ್ಲಿ ಪರಿಣತಿಯನ್ನು ಹೊಂದಿರುವುದು ಮಾತ್ರವಲ್ಲದೆ ಮಾಟ, ಮಂತ್ರ, ಕೃತ್ರಿಮಾದಿ ವಿದ್ಯೆಗಳಲ್ಲಿಯೂ, ಯುದ್ಧವಿದ್ಯೆಗಳಲ್ಲಿಯೂ, ವೈದ್ಯಶಾಸ್ತ್ರಗಳಲ್ಲಿಯೂ ಪರಿಣತಿಯನ್ನು ಹೊಂದಿರುವವರೆಂದು ಉಲ್ಲೇಖಗಳಿವೆ. ಇವರಿಗೆ ಯಜ್ಞಯಾಗಾದಿಗಳಲ್ಲಿ ದೇವತೆಗಳಂತೆ ಹವಿಸ್ಸು ಇರದು. ವಿಷ್ಣುಪುರಾಣದಲ್ಲಿ ಗಂಧರ್ವರು ಬ್ರಹ್ಮನ ಪುತ್ರರು. ಪದ್ಮಪುರಾಣದಲ್ಲಿ ಗಂಧರ್ವರು ವಾಗಧಿದೇವತೆಯಾದ ವಾಕ್ ನ ಪುತ್ರರು. ಗಂಧರ್ವರು ನಾಗರೊಂದಿಗೆ ಯುದ್ಧವನ್ನು ಮಾಡಿ ಅವರ ರಾಜ್ಯವನ್ನೂ ಸಂಪತ್ತನ್ನೂ ಅಪಹರಿಸಿದವರು. ಪುರಾಣಗಳು ಗಂಧರ್ವರನ್ನು ಸುಂದಾರಾಕಾರರೆಂದೂ ಗೀತವಾದ್ಯನರ್ತನಗಳಲ್ಲಿ ಪ್ರಬುದ್ಧರೆಂದೂ, ಇವರು ಮೇಘಗಳ ಒಡೆಯನಾದ ದೇವತೆಗಳ ರಾಜ ಇಂದ್ರನಿಗಾಗಿ ಗಾಯನ - ನರ್ತನಗಳನ್ನು ಮಾಡಿದರೆಂದೂ ಬಣ್ಣಿಸುತ್ತದೆ. ಜಯಾ ಏಕಾದಶಿಗೆ ಸಂಬಂಧಿಸಿದಂತೆ ಮಾಲ್ಯವಾನ್ ಹಾಗೂ ಪುಷ್ಯವತಿ ಎಂಬ ಗಂಧರ್ವ ಪುರುಷ - ಸ್ತ್ರೀ ಇಬ್ಬರೂ ಇಂದ್ರನ ಎದುರಿನಲ್ಲಿ ಗಾಯನ - ನರ್ತನಗಳನ್ನು ಮಾಡುತ್ತಿದ್ದಾಗ ಅವರ ನಡುವೆ ನಡೆದ ಪ್ರೇಮ ಸಲ್ಲಾಪದಿಂದ ಕೋಪೋದ್ರಿಕ್ತನಾಗಿ ಅವರಿಬ್ಬರಿಗೂ ಪಿಶಾಚಿಗಳಂತೆ ಜೀವನವನ್ನು ನಡೆಸಿರಿ ಎಂಬುದಾಗಿ ಶಾಪವನ್ನು ನೀಡುತ್ತಾನೆ. ಈ ಶಾಪದಿಂದ ಅವರು ಹಿಮಾಲಯ ಪರ್ವತದ ಬಳಿಯ ಅರಣ್ಯದ ಬಳಿ ಬಿದ್ದು ಏಕಾದಶಿ ವ್ರತವನ್ನು ಮಾಡಿ ವಿಷ್ಣುವನ್ನು ಮೆಚ್ಚಿಸಿ ಶಾಪವಿಮುಕ್ತರಾಗಿ ಪುನಃ ಸ್ವರ್ಗಕ್ಕೆ ಹೋದರೆಂಬ ಉಪಾಖ್ಯಾನವೊಂದಿದೆ.

Copyright Protected

No part of this publication is allowed for copying or reproducing. Copyright protected. Copyright infringement is punishable offence.



File:Gandharva in Dancing Pose - Mediaeval Period - Magorra - ACCN 76-7 - Government Museum - Mathura 2013-02-23 5449.JPG

**ಸೋಮಾಹರಣ ಆಖ್ಯಾನ –**

ತೈತ್ತಿರೀಯ ಸಂಹಿತಾ, ಐತ್ತರೇಯ ಬ್ರಾಹ್ಮಣ, ಶತಪಥ ಬ್ರಾಹ್ಮಣ, ಮೈತ್ರಾಯಣೀ ಸಂಹಿತಾ ಮುಂತಾದ ವೇದಗ್ರಂಥಗಳೆಲ್ಲವೂ ಕೆಲವು ವ್ಯತ್ಯಾಸಗಳಿದ್ದರೂ ಭಿನ್ನ ಪರಂಪರಾಸ್ರೋತಗಳಿದ್ದರೂ ಒಂದೇ ಕಥಾವಸ್ತುವಿನಲ್ಲಿಯೂ ಮೌಲಿಕ ಸಂಕೇತ ಸಾಮಗ್ರಿಯಲ್ಲಿಯೂ ಸೂಚ್ಯಗಳೂ ಒಂದೇ ಇದ್ದ ಸೋಮಾಹರಣ ಆಖ್ಯಾನವನ್ನು ಹೇಳಿವೆ. ಪೂರ್ವದಲ್ಲಿ ದೇವತೆಗಳಿಗೆ ಪ್ರಿಯವೂ, ಶಕ್ತಿಪುಷ್ಟಿಗಳನ್ನು ನೀಡಬಲ್ಲುದೂ ಆಗಿದ್ದ ಸೋಮವು ಅಂತರಿಕ್ಷದಲ್ಲಿದ್ದ ವಿಶ್ವಾವಸುವೆಂಬ ಆದಿ ಗಂಧರ್ವನ ಬಳಿ ಇದ್ದುಬಿಟ್ಟಿದ್ದರಿಂದ ಈ ಸೋಮವನ್ನು ಅಪಹರಿಸಿ ತಂದುಕೊಡಬೇಕೆಂದು ದೇವತೆಗಳು ಛಂದಸ್ಸುಗಳನ್ನು ಪ್ರಾರ್ಥಿಸಿದಾಗ ಗಾಯತ್ರೀ, ತ್ರಿಷ್ಟುಪ್ ಮತ್ತು ಜಗತೀ ಎಂಬ ಈ ಮೂರು ಛಂದಸ್ಸುಗಳು ಒಪ್ಪಿ ಪಕ್ಷಿರೂಪವನ್ನು ಧರಿಸಿ ಸೋಮವಿದ್ದೆಡೆಗೆ ಹಾರಿದವು. ಇವು ಪಕ್ಷಿರೂಪದಿಂದ ಸೋಮವನ್ನು ಅಪಹರಿಸಲು ತೊಡಗಿದ್ದರಿಂದ ಇದಕ್ಕೆ ಸುಪರ್ಣೋಪಾಖ್ಯಾನವೆಂದೂ ಹೆಸರಾಯಿತು. ತ್ರಿಷ್ಟುಪ್ ಮತ್ತು ಜಗತೀ ಛಂದಸ್ಸುಗಳು ಕಾರ್ಯವನ್ನು ಪೂರ್ಣವಾಗಿ ಸಾಧಿಸಲು ಶ್ಯೇನಾಕಾರದಲ್ಲಿ ನಿರ್ಮಿಸಬೇಕೆಂಬುದು ವಿಧಿಯುಂಟಾಯಿತು. ಇದೇ ವಿಷಯವು ಇನ್ನೊಂದು ಆಖ್ಯಾನದಲ್ಲಿ ವಿಶ್ವಾವಸು ಗಂಧರ್ವನ ಬಳಿ ವಾಕ್ ಎಂಬ ದೇವತೆಯು ಸ್ತ್ರೀ ರೂಪಿಯಾಗಿ ಬಳಿಸಾರಿ ಸೋಮವನ್ನು ಅಪಹರಿಸಿ ತಂದುಕೊಟ್ಟಿತು ಎಂಬುದಾಗಿದೆ. ಎಂದೇ ಇದಕ್ಕೆ ಸೋಮಾಹರಣವೆಂದೇ ಹೆಸರಾಯಿತು. ವೇದವಾಙ್ಮಯದಲ್ಲಿಯೇ ಹೇಳಿರುವ ಈ ಆಖ್ಯಾನವನ್ನು ಪರಮಮಾಹೇಶ್ವರನಾದ, ಭಾರತೀಯ ಸಂಸ್ಕೃತಿಯ ವಿಭೂತಿ ಪುರುಷನಾದ ಅಭಿನವಗುಪ್ತನು ಗಾಯತ್ರಿಯಿಂದ ಛಂದಸ್ಸುಗಳ ನಿರ್ಮಾಣದ ವಿಖ್ಯಾತವಾದ ಈ ತಂತ್ರವನ್ನು ಅನ್ವಯಿಸಿ ಗಾಂಧರ್ವವು ಹೇಳಿದ ಗಾನದ ಹಾಗೂ ಪದದ ಮೂಲದ್ರವ್ಯವಾದ ಸ್ವರ ಮತ್ತು ಛಂದಸ್ಸಿನ ರಚನೆಯನ್ನು ತಾರ್ಕಿಕವಾಗಿ ನಿಷ್ಕಾಸ ಕ್ರಮದಿಂದ ಸ್ವರಾಷ್ಟಕದ ನಿರ್ಮಿತಿಗೆ ಬಹುಶಃ ತನ್ನ ಪೂರ್ವಿಕರಿಂದ ಪಡೆದುಕೊಂಡು ಅನ್ವಯಿಸಿ ಹೇಳಿದ್ದಾನೆ. ವಿಶಾಖಿಲ ಆಚಾರ್ಯನಂತಹ ಪ್ರಾಚೀನ ಭಾರತೀಯ ಸಂಗೀತಶಾಸ್ತ್ರಪ್ರವರ್ತಕರೂ ಈ ಸೋಮಾಹರಣ ಆಖ್ಯಾನದಿಂದ ಪ್ರಭಾವಿತರಾಗಿ


No part of this publication is allowed for copying or reproducing. Copyright protected. Copyright infringement is punishable offence.

ಗಾಂಧರ್ವ ಶಬ್ದಕ್ಕೆ ಅರ್ಥವನ್ನು ಹೇಳಿದ್ದಾರೆ. ಸೋಮಾಹರಣ ಹಾಗೂ ಸ್ವರಾಷ್ಟಕದ ಬಗ್ಗೆಯ ವಿವರಗಳನ್ನು ರಾ. ಸತ್ಯನಾರಾಯಣರವರ 'ಭಾರತೀಯ ಸಂಗೀತದಲ್ಲಿ ಪರಿಭಾಷಾ ಪ್ರಯೋಗ' ವೆಂಬ ಗ್ರಂಥದಲ್ಲಿ ಸವಿವರವಾಗಿ ತಿಳಿಯಬಹುದು.

**ಕೆಲವು ಸಂಗೀತ ಗಂಧರ್ವರು —**

**ನಾರದ —**
ಪ್ರಾಚೀನ ಸಂಗೀತಶಾಸ್ತ್ರಪ್ರವರ್ತಕನಾದ ನಾರದನೊಬ್ಬನು ಗಂಧರ್ವನಾಗಿ, ಮುನಿಯಾಗಿ ಬಹು ಪ್ರಾಚೀನ ಕಾಲದಿಂದಲೂ ಕಾಣಿಸಿಕೊಳ್ಳುತ್ತಾನೆ. ವಾಲ್ಮೀಕಿರಾಮಾಯಣದಲ್ಲಿ ನಾರದರೆಂಬ ದೇವರ್ಷಿಯ ಪ್ರಸ್ತಾಪವು ಇದೆ.(| .1) ಈತ ಬಹುಶಃ ಪುರಾಣಗಳಲ್ಲಿ ಹೇಳುವ ನಾರದಮುನಿಯಿರಬೇಕು. ನಾರದರೆಂಬ ಗಂಧರ್ವ ರಾಜನೂ ಇದ್ದನು. ತುಂಬುರನೆಂಬ ಗಂಧರ್ವರಾಜನು ಅದೇ ಹೆಸರಿನ ಕುಬೇರಸೇವಕ ಗಂಧರ್ವ. ಇವರುಗಳ ಮಾತೂ ರಾಮಾಯಣದಲ್ಲಿ ಇದೆ (|||. 4.19). ಬೇರೆಡೆ ನಾರದ ಸೋದರನಾದ, ತಂಬೂರಿ ವಾದ್ಯದ ಅಧಿದೇವತೆಯಾದ ತುಂಬುರುವನ್ನೂ ಹೇಳಿದೆ. ನಾರದಸಂಹಿತಾ, ನಾರದೀಯಶಿಕ್ಷಾಗಳನ್ನು ಬರೆದ, ಸಂಗೀತಮಕರಂದವೆಂಬ ಅರ್ವಾಚೀನ ಸಂಗೀತಶಾಸ್ತ್ರಗ್ರಂಥವನ್ನು ಬರೆದ ನಾರದ, ಪ್ರಾಚೀನ ಸಂಗೀತಲಕ್ಷಣಗ್ರಂಥಗಳಲ್ಲಿ ಹೇಳಿದ ತುಂಬುರು ಎಂಬ ಶಾಸ್ತ್ರಕಾರ ಇವರೆಲ್ಲ ಬೇರೆ ಬೇರೆಯವರು.
ಗಾಂಧರ್ವವನ್ನು ಭೂತಲದಲ್ಲಿ ಪ್ರಚುರಪಡಿಸದವನು ನಾರದನೆಂದು ಸಾಮವೇದದ ಶಿಕ್ಷೆಯಾದ ನಾರದೀಯಶಿಕ್ಷೆ ಮುಂತಾದ ಅನೇಕ ಆಕರಗಳಿಂದ ತಿಳಿದುಬರುತ್ತದೆ. ಈ 'ಮೌನೇಯಗಂಧರ್ವ'ನಾದ ನಾರದನನ್ನು ಭಾಗವತಪುರಾಣ (XII, 11.34), ಬ್ರಹ್ಮಾಂಡಪುರಾಣ (III, 7,4),ವಾಯುಪುರಾಣ (XXX, 30 ; LXIX, 3), ವಿಷ್ಣುಪುರಾಣ (II, 10, 5) ಗಳು ಹೇಳುತ್ತವೆ. ಮಹಾಭಾರತವು ನಾರದನನ್ನು ಗಾಂಧರ್ವವೇದಪ್ರವರ್ತಕನೆಂದು (ಮಹಾಭಾರತ, ಶಾಂತಿಪರ್ವ, CCX, 21.) ಭರತಮುನಿಯು ನಾರದನನ್ನು ಒಬ್ಬ ಗಂಧರ್ವನೆಂದೂ, ಅಮೃತಮಂಥನದ ನಾಟಕಪ್ರಯೋಗಕಾಲದಲ್ಲಿ ಭಾಗವಹಿಸಿದ ಪಾತ್ರಧಾರಿಗಳಲ್ಲಿ ಒಬ್ಬನೆಂದೂ, ನಾಟ್ಯಶಾಸ್ತ್ರ ವಿಷಯವಾಗಿ ಪ್ರಶ್ನಿಸಿದ ಋಷಿಗಳಲ್ಲಿ ಒಬ್ಬನೆಂದೂ, ಗಂಧರ್ವಶಾಸ್ತ್ರಪ್ರವರ್ತಕರಲ್ಲಿ ಒಬ್ಬನೆಂದೂ, ಧ್ರುವಾಗಾನವನ್ನು ಪರಿಷ್ಕರಿಸಿದ ಶಾಸ್ತ್ರಜ್ಞನೆಂದೂ, ವಾದ್ಯಸಂಗೀತ ಕೋವಿದನೆಂದೂ, ನಾಟ್ಯಾವತಾರ ಸಂದರ್ಭದಲ್ಲಿಯೂ ಹೆಸರು ಹಿಡಿದು ಹೇಳುತ್ತಾನೆ. (ಭರತಮುನಿ, ನಾಟ್ಯಶಾಸ್ತ್ರ, ಕ್ರಮವಾಗಿ V, 32; I, 52 ; XXXVI, 4 ; XXXII, 484 -ಚೌಕಾಂಬಾ ಆವೃತ್ತಿ ; XXXII, 1 ; XXXXIV, 2 ; XXXVII, 19). ದತ್ತಿಲನು, ಗಾಂಧರ್ವವೇದವು ಬ್ರಹ್ಮನಿಂದ ನಾರದನಿಗೆ ಕೊಡಲ್ಪಟ್ಟಿತೆಂದು ಗ್ರಂಥಾರಂಭದಲ್ಲಿಯೇ ಹೇಳುತ್ತಾನೆ (ದತ್ತಿಲ, ದತ್ತಿಲಂ 2 ). ಅಭಿನವಗುಪ್ತನು ಗಾಂಧರ್ವಲಕ್ಷಣಕಥನಸಮಯದಲ್ಲಿ ಅದು ದೇವತೆಗಳಿಗೆ ಪ್ರೀತಿವರ್ಧನವನ್ನುಂಟುಮಾಡುತ್ತದೆನ್ನುವ ಸಂದರ್ಭದಲ್ಲಿ ನಾರದೀಯಶಿಕ್ಷೆಯನ್ನು (ಅಭಿನವಗುಪ್ತ, ಗಾಂಧರ್ವಲಕ್ಷಣಕಥನಸಮಯ, II, ರ ವ್ಯಾಖ್ಯಾನ) ಉಲ್ಲೇಖಿಸುತ್ತಾನೆ ಹಾಗೂ ಗಂಧರ್ವಶಾಸ್ತ್ರಪ್ರವರ್ತಕನೆಂದು ಉಲ್ಲೇಖಿಸುತ್ತಾನೆ. ಆಂಜನೇಯನು ಗಾನಕೋವಿದನೆಂದೂ ಅವನು ತನ್ನ ಗಾನಶಕ್ತಿಯಿಂದ ಗರ್ವಿತನಾದಾಗ ಅದನ್ನು ಮುರಿಯಲೆಂದು ನಾರದನು ಅವನನ್ನು ಗಾಂಧರ್ವಲೋಕಕ್ಕೆ ಕರೆದೊಯ್ದನೆಂದೂ, ಅಲ್ಲಿ ಸ್ವರಾಭಿಮಾನಿದೇವತೆಗಳೂ ರಾಗಾಭಿಮಾನಿ ದೇವತೆಗಳೂ ಭಂಗಾಂಗರಾಗಿ ದುಃಖಿತರಾಗಿದ್ದರೆಂದೂ, ಕಾರಣವನ್ನು ವಿಚಾರಿಸಲಾಗಿ ಆಂಜನೇಯನ ಅಪಶ್ರುತಿ, ಅಪಸ್ವರ, ಅಪಲಯಗಳಿಂದ ಹಾಗಾಯಿತೆಂದು ಹೇಳಿದರೆಂದೂ ಆಂಜನೇಯನಿಗೆ ಇದರಿಂದ ಗರ್ವಭಂಗವಾಯಿತೆಂದೂ ಒಂದು ಕಥೆಯಿದೆ. ಇದು ಅದ್ಭುತರಾಮಾಯಣದಲ್ಲಿರುವ ನಾರದ - ಪರ್ವತರ ಉಪಾಖ್ಯಾನದಿಂದ ಸ್ಫೂರ್ತಿಪಡೆದು ಜನ್ಮತಾಳಿರುವ ಜಾನಪದ ಕಥೆಯಿರಬಹುದೆಂದು ತೋರುತ್ತದೆ. ನಾರದನು ಶಿವನಿಗೆ ಬಗೆಬಗೆಯಾದ ತಂತೀವಾದ್ಯಗಳನ್ನು ನುಡಿಸಿ ಅವನನ್ನು ಒಲಿಸಿದ್ದೂ, ಗೌತಮಮುನಿಯ ಆಶ್ರಮದ ಉಪವನದಲ್ಲಿ ಶಿವಪೂಜೆ ನಡೆಯುತ್ತಿರುವಾಗ ನಾರದನು ವೀಣೆಯನ್ನು ನುಡಿಸಿ ಕಂಬಲಾಶ್ವತರರು ಗಾನ ಮಾಡಿದ ಉಪಾಖ್ಯಾನಗಳು ಇವೆ.

No part of this publication is allowed for copying or reproducing. Copyright protected. Copyright infringement is punishable offence.



File:Narada Statue at Gokarneshwor Mahadev Temple Premises, Gokarna, Kathmandu.jpg

**ಗೋಪ** –
ವಾಲ್ಮೀಕಿ ರಾಮಾಯಣದಲ್ಲಿ ರಾಮನನ್ನು ಕಾಣಲು ಚಿತ್ರಕೂಟಕ್ಕೆ ತೆರಳುತ್ತಿದ್ದ ಭರತ ಹಾಗೂ ಆತನ ಸೈನ್ಯಕ್ಕೆ ಭಾರದ್ವಾಜ ಮುನಿಯು ತನ್ನ ಆಶ್ರಮದಲ್ಲಿ ಸತ್ಕಾರವನ್ನು ನೀಡುತ್ತಾನೆಂದೂ ಈ ಸಂದರ್ಭದಲ್ಲಿ ಗಂಧರ್ವರಾಜರೂ ಪ್ರಸಿದ್ದ ಗಾಯಕರೂ ಆಗಿದ್ದ ನಾರದ, ತುಂಬುರು, ಗೋಪ, ವಿಶ್ವಾವಸು, ಹಾಹಾ, ಹೂಹೂ ಮೊದಲಾದ ದೇವಗಂಧರ್ವರು ಗಾಯನವನ್ನು ಮಾಡುವ ಅನೇಕ ಅಪ್ಸರ ಸ್ತ್ರೀಯರು ನರ್ತಿಸುವ, ದೇವಗಂಧರ್ವರು ವೀಣೆಗಳನ್ನು ನುಡಿಸುವ ಉಲ್ಲೇಖಗಳು ಇವೆ.



File:Five Celestial Musicians LACMA AC1992.254.1-.5.jpg

**ಸ್ವಾತಿ** –
ಭರತನು ತನ್ನ ನಾಟ್ಯಶಾಸ್ತ್ರದ 33 ನೆಯ ಅಧ್ಯಾಯ "ಪುಷ್ಕರ(ಅವನದ್ಧ) ವಾದ್ಯಗಳ" ಲಕ್ಷಣಗಳನ್ನು ಹೇಳುವಲ್ಲಿ ಸ್ವಾತಿ ಹಾಗೂ ನಾರದರು ಗಾಂಧರ್ವದ ಬಗ್ಗೆ, ವಾದ್ಯಗಳನ್ನು ನುಡಿಸುವ ಬಗ್ಗೆ ಅವುಗಳ

ಲಕ್ಷಣ - ಪ್ರಯೋಜನ - ವ್ಯಾಪ್ತಿಗಳ ಬಗ್ಗೆ ಹೇಳಿದ್ದಾರೆಂದು ಉಲ್ಲೇಖಿಸುತ್ತಾನೆ. ಸ್ವಾತಿಯು ಹೇಳಿದ್ದನ್ನನುಲಕ್ಷಿಸಿ ಪುಷ್ಕರ ವಾದ್ಯಗಳಾದ ಮೃದಂಗ, ಪಣವ, ದರ್ದುರಗಳು ಹೇಗೆ ಅಸ್ತಿತ್ವದಲ್ಲಿ ಬಂದವು, ಉಹಾಪೋಹ ಶಕ್ತಿಯಿದ್ದ ಸ್ವಾತಿಯು ಹೇಗೆ ದೇವತೆಗಳ ದುಂದುಭಿಯನ್ನು ನೋಡಿ ಮುರಜ, ಆಲಿಂಗ್ಯ, ಊರ್ಧ್ವಕ, ಆಂಕಿಕಗಳನ್ನೂ, ಝಲ್ಲರೀ, ಪಟಹ ಮುಂತಾದವುಗಳನ್ನು ಧಾತು (ಕಬ್ಬಿಣ)ವಿನಿಂದ, ಮರದಿಂದ ವಾದ್ಯಗಳನ್ನು ತಯಾರಿಸಿ ಅವನ್ನು ಚರ್ಮದಿಂದ ಮುಚ್ಚಿ, ದಾರದಿಂದ ಬಿಗಿದು ತಯಾರಿಸಿದನು ಎಂಬುದರ ಸಂದರ್ಭವನ್ನು ನಿರೂಪಿಸಿ ಈ ವಾದ್ಯಗಳು ಮೇಳಗೂಡಿಸಿ ಸಂಗೀತದಲ್ಲಿ ಪ್ರಾಧಾನ್ಯವಾಗಿ (ಅಂಗ) ಮತ್ತು ಗೌಣವಾಗಿ (ಪ್ರತ್ಯಂಗ) ಬಳಕೆಯಾಗುವ ಉತ್ಸವಾದಿ ಇತರ ಸಂದರ್ಭಗಳನ್ನೂ, ಅವುಗಳ ಬಳಕೆಯಲ್ಲಿ ಹೇಗೆ ಪ್ರಗತಿಯಾಯಿತು ಎಂಬುದನ್ನೂ ಹೇಳುತ್ತಾನೆ. ಸ್ವಾತಿ ಗಂಧರ್ವನನ್ನು ಮುನಿ ಎಂದು ಹೇಳಿ ಗೌರವಿಸುತ್ತಾನೆ.
(ಉಕ್ತಗ್ರಂಥ, ಶ್ಲೋ 1-17)

**ಹಾಹಾ, ಹೂಹೂ ಮತ್ತು ತಂದನ, ತಾನ –**
ಪ್ರಾಚೀನತಮವಾದ ಅಗ್ನಿಪುರಾಣವು ಹಾಹಾ, ಹೂಹೂ, ನಾರದ, ತುಂಬುರು ಎಂಬ ಗಂಧರ್ವರು ಗಾಂಧರ್ವ ವಿದ್ಯೆಯನ್ನು ಮೂರು ಗ್ರಾಮಗಳಲ್ಲಿ ಹಾಡಬಲ್ಲ ವಿಶಾರದರಾಗಿ ಹಾಡಲು ತೊಡಗಿ ಮೂರ್ಛನಾತಾನಗಳನ್ನು ಮಧುರವಾಗಿ, ಪ್ರಸನ್ನವಾಗಿ ಪ್ರಯೋಗಿಸಿದರೆಂದೂ ಇದಕ್ಕೆ ಅಪ್ಸರೆಯರಾದ ವಿಶ್ವಾಚೀ, ಘೃತಾಚೀ, ಊರ್ವಶೀ, ತಿಲೋತ್ತಮೆ, ಮೇನಕೆ, ಸಹಜನ್ಯಾ, ರಂಭಾ ಮೊದಲಾದವರು ಜ್ಞಾನಭಾವವಿಲಾಸಗಳಿಂದ ಬಹುವಾದ ಅಭಿನಯವನ್ನು ಮಾಡಿದರೆಂದೂ ಆಗ ವೇಣು, ವೀಣಾ, ಝರ್ಝರ, ಪಣವ, ಪುಷ್ಕರ, ಮೃದಂಗ, ಪಟಹ, ಆನಕ, ದೇವದುಂದುಭಿ, ಶಂಖ ಮೊದಲಾದ ವಾದ್ಯಗಳು ಮೊಳಗಿದವೆಂದೂ ಹೇಳುತ್ತದೆ. ಈ ಗಂಧರ್ವ ಗಾಯಕರ ಉಲ್ಲೇಖಗಳು ವೀರಶೈವ ಸಾಹಿತ್ಯದಲ್ಲಿಯೂ ದೊರೆಯುತ್ತವೆ.



angkor, cambodia, archeological park, siem reap, temple, apsara, dancer, stone carving, khmer, human representation

ಇನ್ನೊಂದು ಕಥೆಯಲ್ಲಿ ಗಂಧರ್ವರಾದ ಹಾಹಾ ಮತ್ತು ಹುಹೂಗಳಿಗೂ ತಂದನ, ತಾನ ಎಂಬ ಗಂಧರ್ವರಿಗೂ ಸಂಗೀತಸ್ಪರ್ಧೆಯಲ್ಲಿ ಉಂಟಾದ ವಿವಾದವು ಒದಗಲು ಹನುಮಂತನು ಇಬ್ಬರೂ

No part of this publication is allowed for copying or reproducing. Copyright protected. Copyright infringement is punishable offence.

ಸಮಾನರೆಂದು ತೀರ್ಮಾನಿಸಿ ವಿವಾದವನ್ನು ಪರಿಹರಿಸಿದನು (ತ. ಸು. ಶಾಮರಾಯ, ಶಿವಶರಣಕಥಾರತ್ನಕೋಶ, ಪು. 129, 159). ಸೌದಾಮನೀ ಹಾಗೂ ಉಜ್ವಲಾ ಎಂಬಿಬ್ಬರು ಹಾಹಾ ಎನ್ನುವ ಗಂಧರ್ವನ ಮಕ್ಕಳೆಂದೂ ಹುಹುವಿನ ಮಗಳು ಪೀವಾರಾ ಎಂದೂ ಇವರೆಲ್ಲರೂ ದಿವ್ಯಸ್ತ್ರೀಯರೆಂದೂ ಅಪ್ಸರೆಯರಿಂದ ಹುಟ್ಟಿದವರೆಂದೂ ಪ್ರಹ್ಲಾದನ ಮಗಳು ಮಹಲ್ಲಿಕೆಯು ತನ್ನ ಪತಿ ಸೂರ್ಯಪ್ರಭನಿಗೆ ಹೇಳಿದ ಕಥೆಯು ಕಥಾಸರಿತ್ಸಾಗರದಲ್ಲಿ ದೊರೆಯುತ್ತದೆ. (ಕಥಾಸರಿತ್ಸಾಗರ - ಜಗದೀಶ ಶರ್ಮಾ, 303 ನೇ ಸಂಚಿಕೆ, ಹೊಸದಿಗಂತ ಪತ್ರಿಕೆ).

ಹೂಹೂ ಎಂಬ ಗಂಧರ್ವನೊಬ್ಬನು ಕಶ್ಯಪ ಮುನಿಯಿಂದ ಅರಿಷ್ಟೆಯೆಂಬುವವಳಲ್ಲಿ ಜನಿಸಿದ. ಈತನು ದೇವಲ ಮುನಿಯ ಶಾಪದಿಂದ ಮೊಸಳೆಯ ಜನ್ಮವನ್ನು ಪಡೆದು, ಇಂದ್ರದ್ಯುಮ್ನ ಸರೋವರದಲ್ಲಿದ್ದು ಗಜೇಂದ್ರನನ್ನು ಹಿಡಿದು, ವಿಷ್ಣುವಿನ ಚಕ್ರದಿಂದ ಮೊಸಳೆಯ ಜನ್ಮವನ್ನು ನೀಗಿಕೊಂಡು ತನ್ನ ಮೊದಲಿನ ರೂಪವನ್ನು ಪಡೆದ.

**ವಿಶ್ವಾವಸು —**
ಗಂಧರ್ವರು ಗಾನವಿಶಾರದರೆಂದೂ ಕಶ್ಯಪ ಅರಿಷ್ಟರ ಪುತ್ರರೆಂದೂ ಆದ್ದರಿಂದ ಬ್ರಹ್ಮನ ಮೊಮ್ಮಕ್ಕಳೆಂದೂ ವಿಷ್ಣುಪುರಾಣವು ಹೇಳಿದರೆ ಪದ್ಮಪುರಾಣವು ವಾಕ್ಕಿನ ಪುತ್ರರೆಂದು ಹೇಳುತ್ತದೆ. ಋಗ್ವೇದದಲ್ಲಿ ಈ ಜನಾಂಗವು ಸಣ್ಣ ದೇವತೆಗಳಾದರೆ ಪುರಾಣೇತಿಹಾಸಗಳಲ್ಲಿ ಈ ಜನಾಂಗವು ಅತಿಮಾನುಷರು. ದೇವಗಾಯಕರೆಂದೇ ಪ್ರಖ್ಯಾತವಾದ ಗಂಧರ್ವರಲ್ಲಿ ಮನುಷ್ಯಗಂಧರ್ವರು ಹಾಗೂ ದೇವಗಂಧರ್ವರು ಎಂದು ಎರಡು ವಿಧಗಳು. ತೈತ್ತರೀಯ ಉಪನಿಷತ್ತಿನ ಆನಂದವಲ್ಲಿಯು ಜೀವವರ್ಗಗಳಲ್ಲಿ ಆನಂದವು ಬೇರೆ ಬೇರೆ ಹಂತಗಳಲ್ಲಿದ್ದು ವ್ಯತ್ಯಾಸವಿರುತ್ತದೆಂದು ಹೇಳಿ ಒಂದು ಶತಕಾಂಶದಷ್ಟು ಮಾನವನು ಹೊಂದಿದ ಆನಂದವು ಮಾನುಷ್ಯಗಂಧರ್ವನ ಏಕಾಂಶದಷ್ಟೆ ಆನಂದಕ್ಕೆ ಸಮಾನವೆಂದೂ, ಹಾಗೆಯೇ ಒಂದು ಶತಕಾಂಶದಷ್ಟು ಮನುಷ್ಯಗಂಧರ್ವರ ಆನಂದಕ್ಕೆ ದೇವಗಂಧರ್ವರ ಆನಂದದ ಏಕಾಂಶದಷ್ಟೆ ಸಮವೆಂದೂ, ಇಂತಹ ದೇವಗಂಧರ್ವರ ಶತಕಾಂಶದಷ್ಟು ಆನಂದವು ಪಿತೃಗಳಲ್ಲಿ ನೆಲೆಗೊಂಡಿರುವ ಆನಂದದ ಏಕಾಂಶದಷ್ಟೆ ಸಮವೆಂದೂ, ಇವೆಲ್ಲವೂ ಸರ್ವಸಂಗ ಪರಿತ್ಯಾಗಿಯಾದ, ಸಕಲ ವಾಸನಾದಿಗಳನ್ನು ಕಳೆದುಕೊಂಡ, ಪ್ರಾಜ್ಞಋಷಿಯು ಅನುಭವಿಸುವ ಚಿದಾನಂದಕ್ಕೆ ಸಮ ಎಂಬ ವಿವರಣೆಯನ್ನು ಹೇಳುತ್ತದೆ! ಈ ದೇವಗಂಧರ್ವ ಜನಾಂಗವೇ ಇಂದ್ರಲೋಕದ ದೇವತೆಗಳನ್ನು ತಮ್ಮ ಮಧುರವಾದ ಗಾಯನದಿಂದ ಸಂತೋಷಪಡಿಸುವವರು. ಅತ್ಯಂತ ಪ್ರಾಚೀನವಾಗಿ ಉಲ್ಲೇಖಿಸಲ್ಪಟ್ಟ, ದೇವಗಂಧರ್ವರ ರಾಜರಲ್ಲೊಬ್ಬನಾದ ವಿಶ್ವಾವಸುವು ದೇವತೆಗಳ ಸೋಮವನ್ನು ಕಾಪಾಡುವ ಜವಾಬ್ದಾರಿಯನ್ನು ಹೊತ್ತವನು. ಈತನು ಗಾಯನ ಹಾಗೂ ವೀಣಾವಾದನಗಳಲ್ಲಿ ಪರಿಣತ. ಸರಸ್ವತೀ ನದಿದಡದ ಪವಿತ್ರ ಕ್ಷೇತ್ರದಲ್ಲಿದ್ದವನು. ವಿಶ್ವಾವಸುವಿನ ವೀಣಾವಾದನದ ಮಾಧುರ್ಯವು ಹೇಗಿತ್ತೆಂದರೆ ಕೇಳುತ್ತಿದ್ದ ಪ್ರತಿಯೊಬ್ಬರೂ ಆತನು ತಮಗೆಂದೇ ವೀಣಾವಾದನವನ್ನು ಮಾಡುತ್ತಿದ್ದಾನೆಂಬ ಭಾವನೆಯು ಉಂಟಾಗುತ್ತಿತ್ತಂತೆ! ಈತನು ನುಡಿಸುತ್ತಿದ್ದ ಏಳು ತಂತಿಗಳ ಪರಿವಾದಿನೀ ವೀಣಾವಾದನಕ್ಕೆ 43000 ಜನ ಗಂಧರ್ವರು ನರ್ತಿಸಿದರಂತೆ! ಇದು ಈಗಿನ ಅನೇಕ ಹೊಸ ಜನಾಂಗವು ಮೆಚ್ಚುವ ಕೆಲವು ಕಾರ್ಯಕ್ರಮಗಳನ್ನು ನೆನಪಿಗೆ ತರುತ್ತದಲ್ಲವೆ? ಪರಿವಾದಿನೀ ವೀಣೆಯು Harp ತರಹದ ವಾದ್ಯ. ಅತಿಮಧುರ ನಾದವನ್ನು ಹೊಂದಿರುವಂತಹದು. ಬೃಹತೀ ಎಂಬುದು ವಿಶ್ವಾವಸುವಿನ ವೀಣೆಯೆಂದು ಜೈನ ಗ್ರಂಥಗಳಲ್ಲಿ ಉಲ್ಲೇಖವಿದೆ. ರಾಮಾಯಣದಲ್ಲಿಯೂ ಈತನ ಉಲ್ಲೇಖವಿದ್ದುದನ್ನು ಮೇಲೆ ಹೇಳಿದೆ. ವಿಶ್ವಾವಸು ಗಂಧರ್ವನ ಹೆಸರಿನ ಉಲ್ಲೇಖವೇ ಅತ್ಯಂತ ಪ್ರಾಚೀನವಾದುದು. ವಿಶ್ವಾವಸುವು ದೇವಗಂಧರ್ವನೆಂಬ ಹೆಸರಿನಲ್ಲಿ ಋಗ್ವೇದದ (10.139) ಭಾಗವನ್ನು ರಚಿಸಿದವನು.

**ಚಿತ್ರಸೇನ —**
ಚಿತ್ರಸೇನನೆಂಬ ಪ್ರಾಚೀನ ಅಥವಾ ಅರ್ವಾಚೀನ ಸಂಗೀತಲಾಕ್ಷಣಿಕನು ಎಲ್ಲಿಯೂ ಕಂಡುಬರುವುದಿಲ್ಲ. ಆದರೆ ಗಂಧರ್ವರ ರಾಜನೆಂಬ ಅರ್ಥದಲ್ಲಿ ತೆಗೆದುಕೊಂಡರೆ ರಾಗರತ್ನಾಕರದ ಕರ್ತೃವೊಬ್ಬನು ಇದೇ ಹೆಸರಿನಲ್ಲಿ ಇದ್ದರೂ ಈ ಗ್ರಂಥದಲ್ಲಿ ಈತನು ಗಂಧರ್ವರ ರಾಜನೆಂಬ ಸಮೀಕರಣಕ್ಕೆ ಆಸ್ಪದವಿಲ್ಲವೆಂದು ಪದ್ಮಶ್ರೀ ರಾ. ಸತ್ಯನಾರಾಯಣರವರು ಹೇಳಿದ್ದಾರೆ. ಗಂಧರ್ವ

No part of this publication is allowed for copying or reproducing. Copyright protected. Copyright infringement is punishable offence.

ರಾಜನಾದ ವಿಶ್ವಾವಸುವಿನ ಪುತ್ರನಾದ ಚಿತ್ರಸೇನನ ಉಲ್ಲೇಖವು ಹರಿವಂಶದಲ್ಲಿ ಕಂಡುಬರುತ್ತದೆ. (ಹರಿವಂಶ, 7224). ಮಹಾಭಾರತದಲ್ಲಿ ಈ ಗಂಧರ್ವನ ಹೆಸರು ಹಲವು ಬಾರಿ ಬರುತ್ತದೆ. ಸಭಾಪರ್ವದಲ್ಲಿ ಒಮ್ಮೆ ಇವನು ಉಲ್ಲೇಖಿತನಾಗಿದ್ದರೆ (ಮಹಾಭಾರತ, ಸಭಾಪರ್ವ, IV, 43 ; X, 27) ವನಪರ್ವದಲ್ಲಿ ಇಂದ್ರಲೋಕದಲ್ಲಿ ಆತನ ಆಜ್ಞೆಯನುಸಾರವಾಗಿ ವಿಶ್ವಾವಸುವಿನ ಪುತ್ರನಾದ ಚಿತ್ರಸೇನನು ಅರ್ಜುನನಿಗೆ ಗೀತ ವಾದ್ಯ ನೃತ್ಯಗಳನ್ನು ಹೇಳಿಕೊಟ್ಟವನೆಂದೂ (ಮ. ಭಾ., ವನಪರ್ವ, XXXXIII, 38-43). ದುರ್ಯೋಧನನನ್ನು ಅವನ ಘೋಷಯಾತ್ರಾಸಮಯದಲ್ಲಿ ಬಂಧಿಸಿ ಅಪಮಾನಗೊಳಿಸಿದವನೆಂದೂ ( ಅದೇ ಗ್ರಂಥ ಮತ್ತು ಪರ್ವ. XXXXI, 21), ಅರ್ಜುನನಿಂದ ನಂತರ ಪರಾಜಿತನಾದವನೆಂದೂ (ಅದೇ ಗ್ರಂಥ, CCXXXXV - CCXXXXV) ಉಲ್ಲೇಖಿತನಾಗಿದ್ದಾನೆ. ಶಾಂತಿಪರ್ವದಲ್ಲಿ ನಾರದನೇ ಮೊದಲಾಗಿ ಗಾಂಧರ್ವವೇದವನ್ನು ಹೇಳಿದವನೆಂದೂ (210.21) ಗಾಂಧರ್ವವೇದವು ಸಾಮ ಉದ್ಘೋಷಗಳನ್ನೂ, ಗಾಯನವನ್ನೂ, ಸಂಗೀತವಾದ್ಯ ವಾದನಗಳನ್ನೂ ಒಳಗೊಂಡಿದೆಯೆಂದು ಹೇಳಿದೆ. (168. 58). ನರ್ತನಾಗಾರಗಳಲ್ಲಿ ಗಂಧರ್ವರು ಯಾವಾಗಲೂ ಅದೃಶ್ಯರಾಗಿ ನೆಲೆಸಿರುತ್ತಾರೆ ಎಂಬ ಪ್ರಾಚೀನತರ ಸಾಂಪ್ರದಾಯಿಕ ನಂಬುಗೆಯನ್ನು ಮಹಾಭಾರತವು ಒಳಗೊಂಡಿದೆ.

**ತುಂಬುರು** — ಭಾರತೀಯ ಸಂಸ್ಕೃತಿಯಲ್ಲಿಯೂ ಸಂಗೀತದಲ್ಲಿಯೂ ತುಂಬುರುವೆಂಬ ಗಂಧರ್ವನು ಬಹುವಾಗಿ ಹೇಳಲ್ಪಟ್ಟಿದ್ದಾನೆ. ಭಾಗವತ ಪುರಾಣದಲ್ಲಿ ತುಂಬುರುವು ಕಶ್ಯಪ ಹಾಗೂ ಪ್ರದಾ ದಂಪತಿಗಳ ಪುತ್ರ. ನಾರದನ ಶಿಷ್ಯ. ರಾಮಾಯಣದಲ್ಲಿ ತುಂಬುರುವು ಸಂಗೀತ ಕೋವಿದ ಗಂಧರ್ವನಾಗಿ ಪದೇಪದೇ ಹೇಳಲ್ಪಟ್ಟಿದ್ದಾನೆ. ಚಿತ್ರಕೂಟದಲ್ಲಿ ಭರದ್ವಾಜ ಮುನಿಯು ರಾಮನಿಗೆ ಏರ್ಪಡಿಸಿದ ಸತ್ಕಾರಕೂಟದಲ್ಲಿ ತುಂಬುರುವು ಹಾಡಿದನೆಂದೂ, ಆತನು ಕುಬೇರನನ್ನು ಸೇವಿಸುತ್ತಿದ್ದ ಒಬ್ಬ ಗಂಧರ್ವನೆಂದೂ ತಿಳಿದುಬರುತ್ತದೆ. ತನ್ನ ಕರ್ತವ್ಯವನ್ನು ಉಪೇಕ್ಷಿಸಿದುದರಿಂದ ಅವನು ಶಾಪಗ್ರಸ್ತನಾಗಿ ಜಯನೆಂಬ ರಾಕ್ಷಸನ ಮಗನಾದ ವಿರಾಧನಾಗಿ ಜನಿಸಿ ದಂಡಕಾರಣ್ಯದಲ್ಲಿ ಅವನು ಸೀತೆಯನ್ನು ಅಪಹರಿಸಲು ಯತ್ನಿಸಲೆಳೆಸಿ ರಾಮನಿಂದ ಪರಾಜಿತನಾಗಿ ಶಾಪವಿಮುಕ್ತನಾಗುತ್ತಾನೆ. ( ರಾಮಾಯಣ, II, 91, 16, 17, 46 ಇತ್ಯಾದಿ III, 4,14 ಮತ್ತು ಮುಂದಕ್ಕೆ). ಮಹಾಭಾರತದಲ್ಲಿ ತುಂಬುರುವು ಅರಿಷ್ಟಾ ಪುತ್ರನಾಗಿ, ದೇವಗಂಧರ್ವನಾಗಿ ಹಲವೆಡೆ ಉಕ್ತನಾಗಿದ್ದಾನೆ ( ಮಹಾಭಾರತ, ಆದಿಪರ್ವ, LXVI, 51 ; CX, 25 ; ಸಭಾಪರ್ವ, VII, X, 27, ಇತ್ಯಾದಿ,). ಅದರಲ್ಲಿಯೆ ಸುಪ್ರಿಯಾ, ಅಹಿಬಾಹು, ಹಾಹಾ, ಹುಹೂ ಎಂಬ ಗಂಧರ್ವರ ರಕ್ಷಕನಾಗಿದ್ದಾನೆ. ಭಾಗವತಪುರಾಣದಲ್ಲಿ ತುಂಬುರುವು ನಾರದನ ಶಿಷ್ಯನಾದ ಗಂಧರ್ವನಾಗಿ, ಗಾಯಕನಾಗಿ ( ಭಾಗವತಪುರಾಣ, I, 13, 37, 59 ಮತ್ತು V, 25, 8 ; X, 25, 32 ; X, 27, 24) ಉಲ್ಲೇಖಿತನಾಗಿದ್ದಾನೆ. ವಾಯುಪುರಾಣದಲ್ಲಿ ಗಂಧರ್ವಶಾಸ್ತ್ರಪರಿಣತನೆಂದು ತುಂಬುರುವಿನ ಪ್ರಸ್ತಾಪವಿದೆ. (ವಾಯುಪುರಾಣ, LXIX, 47, 479). ಕಲಾವತಿ ಎಂಬುದು ತುಂಬುರುವಿನ ವೀಣೆ. ತುಂಬುರುವು ಜೈನರ 5ನೇ ತೀರ್ಥಂಕರನಾದ ಸುಮತಿದೇವನ ಯಕ್ಷನೂ ಹೌದು. ಪ್ರಸಿದ್ಧ ಯಾತ್ರಾಸ್ಥಳವಾದ ತಿರುಮಲದಿಂದ 12 ಕಿಮೀ ಹಾಗೂ ಪಾಪವಿನಾಶನಂನಿಂದ 7 ಕಿಮೀ ದೂರದಲ್ಲಿ ತುಂಬುರು ತೀರ್ಥವಿದೆ. ಈ ತುಂಬುರು ತೀರ್ಥಕ್ಕೆ ಸಂಬಂಧಿಸಿದಂತೆ ಒಂದು ಆಖ್ಯಾನವಿದೆ. ತನ್ನ ಪತ್ನಿಯ ಸೋಮಾರಿತನದಿಂದ ಕೋಪಗೊಂಡ ಗಂಧರ್ವನೊಬ್ಬನು ಆಕೆಯನ್ನು ಕಪ್ಪೆಯಾಗುವಂತೆ ಶಪಿಸುತ್ತಾನೆ. ಅಗಸ್ತ್ಯಮುನಿಯು ತನ್ನ ಶಿಷ್ಯರೊಂದಿಗೆ ಆಗಮಿಸಿ ಆ ಕ್ಷೇತ್ರ ಮಹಿಮೆಯನ್ನು ತನ್ನ ಶಿಷ್ಯರಿಗೆ ಹೇಳಿದೊಡನೆಯೇ ಈ ಗಂಧರ್ವ ಸ್ತ್ರೀಗೆ ಶಾಪವಿಮೋಚನೆಯಾಗಿ ಆಕೆಯ ಕಪ್ಪೆಯ ರೂಪವು ಕಳೆದು ಹಿಂದಿನ ಸ್ವರೂಪವನ್ನು ಪಡೆದುಕೊಂಡಳು. ಎಂದೇ ಈ ಕ್ಷೇತ್ರಕ್ಕೆ ತುಂಬುರು ತೀರ್ಥವೆಂದು ಹೆಸರಾಯಿತು. ತುಂಬುರುವು ದೇವಗಾಯಕನೆಂದೂ ಕಪ್ಪೆಯು ಧೈವತ ಸ್ವರಕ್ಕೆ ಹೇಳಲ್ಪಟ್ಟಿದೆಯೆಂದೂ, ಅಗಸ್ತ್ಯನು ತಮಿಳುನಾಡಿನಲ್ಲಿ ಪ್ರಮುಖ ಸಂಗೀತಶಾಸ್ತ್ರಜ್ಞನೆಂದೂ ಗ್ರಹಿಸಿದರೆ ಈ ಕಥೆಯನ್ನು ಸಂಗೀತಕ್ಕೆ ಸಂಬಂಧಿಸಿದಂತೆ ಊಹಿಸಿಕೊಳ್ಳುವುದೂ ಶಕ್ಯವಿದೆ.

ಸಂಗೀತಶಾಸ್ತ್ರಗ್ರಂಥಗಳಲ್ಲಿ ತುಂಬುರುವಿನ ಪೂರ್ಣಗ್ರಂಥವು ದೊರೆಯದಿದ್ದರೂ ಆತನ ಉಕ್ತಿಗಳೂ, ಮತಗಳೂ ಉದ್ಧೃತವಾಗಿವೆ. ಭರತನು ತುಂಬುರುವನ್ನು ಭರತಪುತ್ರ (ಶಿಷ್ಯ)ನನ್ನಾಗಿ ಎಣಿಸುವುದಿಲ್ಲ. ಅಭಿನವಗುಪ್ತನು ತುಂಬುರುವನ್ನು ತಾಂಡವಲಕ್ಷಣಸಂದರ್ಭದಲ್ಲಿ ಒಮ್ಮೆ "ತುಂಬುರೇಣದಮುಕ್ತಂ : ಅಂಗಹಾರಾಭಿಧಾನಾತ್ತು ಕರಣೈ ರೇಚಿಕಾನ್ ವಿದುಃ" (ಅಭಿನವಗುಪ್ತ ಉಕ್ತಗ್ರಂಥ, ಭರತಮುನಿ, ಉಕ್ತಗ್ರಂಥ IV, 248 ರ ವ್ಯಾಖ್ಯಾನ) ಎಂದಿದ್ದಾನೆ. ನಾನ್ಯದೇವನು ತನ್ನ

No part of this publication is allowed for copying or reproducing. Copyright protected. Copyright infringement is punishable offence.

ಸರಸ್ವತೀಹೃದಯಾಲಂಕಾರಹಾರದಲ್ಲಿ ಷಡ್ಜ ಕೈಶಿಕೀ ಜಾತಿಯ ಲಕ್ಷಣವರ್ಣನದಲ್ಲಿ ಮತ್ತು ತತಾತೋದ್ಯಾಧ್ಯಾಯದಲ್ಲಿ, ಎರಡು ಬಾರಿ ಉಲ್ಲೇಖಿಸುತ್ತಾನೆ. ಮತಂಗನು ತನ್ನ ಬೃಹದ್ದೇಶಿಯಲ್ಲಿ ಚತುರನೆಂಬ ಲಾಕ್ಷಣಿಕನ ಹೆಸರಿನಲ್ಲಿ ಉದ್ಧರಿಸಿಕೊಳ್ಳುವುದನ್ನು ಕಲ್ಲಿನಾಥನು ಶಾರ್ಙ್ಗದೇವನ ಸಂಗೀತರತ್ನಾಕರದ ತನ್ನ ವ್ಯಾಖ್ಯಾನಗ್ರಂಥವಾದ ಸಂಗೀತಕಲಾನಿಧಿಯಲ್ಲಿ ತುಂಬುರುವಿನದೆಂದೇ ಸ್ಪಷ್ಟೋಕ್ತಿಯಲ್ಲಿ ಹೇಳುತ್ತಾನೆ. ಇದೇ ಮತವನ್ನು ಕುಂಭಕರ್ಣನು ತನ್ನ ಸಂಗೀತರಾಜದಲ್ಲಿ ಹೇಳುತ್ತಾನೆ. ಮತಂಗನು ತುಂಬುರುವನ್ನು ಸ್ವರಗಾಯಕನೆಂದು ಹೇಳಿದ್ದು, ತುಂಬುರುವಿನ ಹೆಸರಿನ ಭಾಷಾರಾಗವೊಂದನ್ನೂ, ನಾರದ ತುಂಬುರುಗಳು ಹಾಡುವ ಕಲಿಂಗ ಎಂಬ ಮೂಲ ಭಾಷಾರಾಗವನ್ನೂ ವರ್ಣಿಸುತ್ತಾನೆ. ತುಂಬುರು ರಾಗವನ್ನು ರೂಪಕಗಳಲ್ಲಿ ಬ್ರಹ್ಮಾದಿ ಪಾತ್ರಗಳು ಹಾಡುತ್ತಾರೆಂದೂ, ಇದು ಶಾರ್ದೂಲ ಮತವೆಂದೂ ಇದು ಭಿನ್ನಷಡ್ಜಜನ್ಯ ಭಾಷಾರಾಗವೆಂದೂ ಲಕ್ಷಿಸುತ್ತಾನೆ. ಹರಿಪಾಲನು ತನ್ನ ಸಂಗೀತಸುಧಾಕರದಲ್ಲಿ ತುಂಬುರುವನ್ನು ಶ್ರುತಿಲಕ್ಷಣಕ್ಕಾಗಿ ಆಶ್ರಯಿಸುತ್ತಾನೆ. ಇದನ್ನೇ ಮುಮ್ಮಡಿ ಚಿಕ್ಕಭೂಪಾಲನು ತನ್ನ ಅಭಿನವಭರತಸಾರಸಂಗ್ರಹದಲ್ಲಿ ಅಕ್ಷರಶಃ ಎತ್ತಿಕೊಳ್ಳುತ್ತಾನೆ. ಶಾರ್ಙ್ಗದೇವನು ತುಂಬುರುವನ್ನು ಪೂರ್ವಾಚಾರ್ಯರಲ್ಲಿ ಎಣಿಸಿದ್ದಾನೆ. ಜಾಯಸೇನಾಪತಿಯು ತನ್ನ ನೃತ್ತರತ್ನಾವಳಿಯಲ್ಲಿ ತುಂಬುರುವನ್ನು ಭರತಪುತ್ರರಲ್ಲೊಬ್ಬನೆಂದೂ ತನ್ನ ಗುರುವಿನ ಹೆಜ್ಜೆಗಳಲ್ಲೇ ತಾನೂ ಮುಂದುವರೆದು ಶಾಸ್ತ್ರವನ್ನು ಬೆಳೆಸಿದೆನೆಂದು ಹೇಳಿದ್ದಾನೆಂದು ಹೇಳಿ ಹೆಚ್ಚುವರಿ ರೇಚಕಗಳನ್ನು ಉಲ್ಲೇಖಿಸಲು ಉದ್ಧರಿಸಿಕೊಳ್ಳುತ್ತಾನೆ. ಸಂಗೀತಮಕರಂದಕಾರನಾದ ನಾರದನೂ ಇವನನ್ನು ಪೂರ್ವಾಚಾರ್ಯನೆಂದು ಹೆಸರಿಸುತ್ತಾನೆ. ಗೋವಿಂದದೀಕ್ಷಿತನು ತನ್ನ ಸಂಗೀತಸುಧಾದಲ್ಲಿ ತಾನಗಳ ಸಂಖ್ಯೆಯನ್ನು ನಿರ್ಣಯಿಸುವಾಗ ತುಂಬುರುವನ್ನು ನಾರದನೊಂದಿಗೆ ಸ್ಮರಿಸುತ್ತಾನೆ. ತುಳಜೇಂದ್ರನು ತನ್ನ ಸಂಗೀತಸಾರಾಮೃತದಲ್ಲಿ ಶ್ರುತಿ ತ್ರೈವಿಧ್ಯ ವಿಷಯಕವಾದ ಮೇಲ್ಕಂಡ ಶ್ಲೋಕಗಳನ್ನು ಬಹುಶಃ ಕಲ್ಲಿನಾಥನಿಂದ ಉದ್ಧರಿಸಿಕೊಳ್ಳುತ್ತಾನೆ ಮತ್ತು ವಾದ್ಯದ ಚತುರ್ವಿಧ ವರ್ಣನೆಯಲ್ಲಿ ನಂದಿ, ಸ್ವಾತಿ, ನಾರದರೊಂದಿಗೆ ತುಂಬುರುವನ್ನು ಉಲ್ಲೇಖಿಸುತ್ತಾನೆ. ತುಂಬುರು ರಚಿತವೆನ್ನಲಾಗುವ ತುಂಬುರು ನಾಟಕದಿಂದ ಸಂಗೀತಸಾರವೂ ಸಂಗೀತದಾಮೋದರವೂ ಶ್ಲೋಕಗಳನ್ನು ಉದ್ಧರಿಸಿಕೊಳ್ಳುತ್ತವೆಂದು ರಾಮಕೃಷ್ಣ ಕವಿಯವರು ತಮ್ಮ ಭರತಕೋಶದಲ್ಲಿ ಹೇಳುತ್ತಾರೆ. (ಉಕ್ತಗ್ರಂಥ, ಪು. 253).

ಕ್ರಿ. ಶ. 8 ನೆಯ ಶತಮಾನದಲ್ಲಿ ಕಾಂಬೋಡಿಯಾ ದೇಶದಲ್ಲಿ ತಾಂತ್ರಿಕ ವಿದ್ಯೆಯು ಹಬ್ಬಿ ಅದನ್ನು ಕುರಿತಾಗಿ ಗ್ರಂಥಗಳ ರಚನೆಯಾದವು. ಇದರಲ್ಲಿ ಪ್ರಮುಖವಾದ ಶಿರಚ್ಛೇದ, ವಿನಾಶಿಖ, ಸಮ್ಮೋಹ ಮತ್ತು ನಾಯೋತ್ತರಗಳೆಂಬ ಶೈವದರ್ಶನದ ಗ್ರಂಥಗಳು 7 - 8ನೆಯ ಶತಮಾನಗಳಲ್ಲಿಯೆ ಪ್ರಯೋಕ್ತೃಗಳಿಂದ ಅಧ್ಯಯನ ಮಾಡಲ್ಪಡುತ್ತಿದ್ದವು. ಈ ಗ್ರಂಥಗಳು ಕಂಬುಜದೇಶದಲ್ಲಿ 'ಸ್ದೊಕ್ ಕಕ್ ಥೊಮ್' (_*Sdok Kak Thom)* ಎಂಬ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿವೆ. ಇವು 'ವಕ್ತ ಚತುಷ್ಕಂ' ಕುರಿತಾಗಿಯೂ ದೇವತುಂಬುರುವಿನಿಂದ ಪ್ರಯೋಗದಲ್ಲಿತ್ತೆನ್ನಲಾದ 'ದೇವರಾಜ'ವೆಂಬ ಧಾರ್ಮಿಕವಿಧಿಯನ್ನು ಕುರಿತೂ, ಹಾಗೂ ಈ ತುಂಬುರುವಿಗೆ ತಂಬುರವಾದ್ಯವನ್ನು ಸಂಬಂಧಿಸಿಯೂ ಹೇಳಿದೆ. ಮೇಲೆ ಹೇಳಿದ ಸೂತ್ರಗಳ ಚೀನೀ ಭಾಷೆಯ ಅನುವಾದ ಗ್ರಂಥವಾದ 'ಪಸಡಿಕಾ ಸ್ತುತ್ತಾಂತ' ದಲ್ಲಿ ಗಂಧಬ್ಬ ತಿಂಬಿರುವನ್ನು ಉಲ್ಲೇಖಿಸಿದೆ. ತ್ರಿಪಿಟಿಕಾ ಗ್ರಂಥದ ಚೀನೀ ಭಾಷೆಯ ಅನುವಾದದಲ್ಲಿ ಗಂಧರ್ವ ಶಬ್ದವು 'Tau - feou - lu = Tam - biu - ru = Tumburu, ಅಥವಾ Teou - feou - lou = Teu - bieu - ru = Tumburu ಎಂಬುದಾಗಿ ಆಗಿದೆ.

No part of this publication is allowed for copying or reproducing. Copyright protected. Copyright infringement is punishable offence.



**<u>ಬೌದ್ಧ ಧರ್ಮದಲ್ಲಿ ಗಾನಗಂಧರ್ವರು</u> —**

ಬೌದ್ಧಜಾತಕ ಗ್ರಂಥಗಳಲ್ಲಿ ಗಾಂಧರ್ವ ಸಂಗೀತವನ್ನು ಲೌಕಿಕ ಗಾಯನವೆಂಬ ಅರ್ಥದಲ್ಲಿ ಪ್ರಯೋಗಿಸಿದೆ. ಪಾಲಿ ಭಾಷೆಯಲ್ಲಿ ಗಂಧರ್ವವು ಗನ್ಧಬ್ಬ ಎಂದಾಗುತ್ತದೆ. ಗೌತಮಬುದ್ಧನು ತನ್ನ ಬಾಲ್ಯದಲ್ಲಿ ಕಲಿತ ಹಲವು ವಿದ್ಯೆಗಳಲ್ಲಿ 'ಗನ್ಧಬ್ಬ ವಿಜ್ಜಾ' ಒಂದಾಗಿತ್ತೆಂದು ಲಲಿತವಿಸ್ತರದಲ್ಲಿ ಹೇಳಿದೆ. ಮಹಾಯಾನವು ಗನ್ಧಬ್ಬರೆಂಬ ಈ ದಿವ್ಯಗಾಯಕರು ದೇವತೆಗಳನ್ನು ಹಿಂಬಾಲಿಸುತ್ತಾರೆಂದೂ ದೇವತೆಗಳಿಗಿಂತ, ದಾನವರುಗಳಿಗಿಂತ ಕೆಳವರ್ಗದವರೆಂದೂ ನಾಗ ರಾಜರುಗಳು ತಿರ್ಯಗ್ಗತಿಗೆ ಒಳಪಟ್ಟ ಜನಾಂಗದವರೆಂದೂ ಹೇಳುತ್ತದೆ. ಈ ಗಂಧರ್ವರು 'ದಶರತ್ನಗಿರಿ'ಯಲ್ಲಿ ವಾಸಿಸುವವರೆಂದೂ ದೇವತೆಗಳನ್ನು ತಮ್ಮ ಸಂಗೀತದಿಂದ ತೃಪ್ತಿ - ಸಂತೋಷಗೊಳಿಸುವರೆಂದೂ ಹೇಳಿದೆ. ಗಂಧರ್ವ ಮತ್ತು ಯಕ್ಷವೆಂಬ ಶಬ್ದವು ಸಮಾನಾರ್ಥದಲ್ಲಿ ಒಂದೇ ವ್ಯಕ್ತಿಗೆ ಉಲ್ಲೇಖಿಸುವುದು ಹಲವೆಡೆ ತೋರುತ್ತದೆ. ಸಂಗೀತ ಪರಿಣತರು, ದೇವತೆಗಳನ್ನು ಅನುಸರಿಸುತ್ತಾರೆ ಎಂದು ಮಹಾಪ್ರಜ್ಞಾಪಾರಮಿತಶಾಸ್ತ್ರವು ತನ್ನ 15 ನೆಯ ಅಧ್ಯಾಯದಲ್ಲಿ ಹೇಳುತ್ತದೆ. ಗಂಧರ್ವರು ಪೂರ್ವದೇಶದ ಅಧಿಪತಿಯಾದ ಧೃತರಾಷ್ಟ್ರನ (ಈತ ಮಹಾಭಾರತದ ಧೃತರಾಷ್ಟ್ರನಲ್ಲ, ಗಂಧರ್ವ ರಾಜ) ಪ್ರಜೆಗಳು. ವೃಕ್ಷ - ಪುಷ್ಪ - ವನಾದಿಗಳಿಗೆ ಸಂಬಂಧಿಸಿದವರು. ಬೌದ್ಧ ಸಂನ್ಯಾಸಿಗಳ ತಪೋಭಂಗವನ್ನುಂಟುಮಾಡುವವರು ಎಂಬ ನಂಬುಗೆಗಳಿವೆ.

ಬೌದ್ಧ ಧರ್ಮದಲ್ಲಿ ಪಣದ, ನಳ, ಚಿತ್ರಸೇನ, ರಾಜ ಎಂಬ ಗಂಧರ್ವರೂ, ತಿಂಬುರು (=ತುಂಬುರು), ಪಂಚಶಿಖ ಮತ್ತು ಮಾತಲಿಗಳು ಎಂಬ ಮುಖ್ಯಗಂಧರ್ವರುಗಳನ್ನು ಹೇಳಿದೆ. ಇದರಲ್ಲಿ ಪಂಚಶಿಖನು ನಾಲ್ಕು ಸ್ವರ್ಗಲೋಕಗಳ ಅಧಿಪತಿಗಳಿಗೆ ಸಂದೇಶವಾಹಕನಾದರೆ, ಮಾತಲಿಯು ಶಕ್ರ ಎಂಬ ಬೌದ್ಧರ ಇಂದ್ರನಿಗೆ ರಥಸಾರಥಿಯಾದವನು. ಈ ಶಕ್ರನು ತ್ರಯಸ್ತ್ರಿಂಶ ದೇವಸ್ ಲೋಕವನ್ನು ಆಳುವವನು. ತಿಂಬುರು (= ತುಂಬುರು) ಎನ್ನುವವನು ಗಂಧರ್ವರ ಮುಖ್ಯಸ್ಥ. ಆತನ ಪುತ್ರಿ ಬದ್ಧಾಸೂರ್ಯವಚಸಾ (ಬದ್ದಸೂರಿಯವಚ್ಚಸಾ) ಳನ್ನು ಪಂಚಶಿಖನೆಂಬ ಇನ್ನೊಬ್ಬ ಗಂಧರ್ವನು, ಆಕೆಯು ಶಕ್ರನ ಎದುರು ನರ್ತಿಸುವಾಗ ನೋಡಿ ಮೋಹಿಸಿ ಪ್ರೀತಿಸಿದನು. ಆದರೆ ಆ ಸಮಯದಲ್ಲಿ ಸೂರ್ಯವಚಸಾಳು ಮಾತಲಿಯ ಪುತ್ರನಾದ ಶಿಖಂಡಿ (ಶಿಖದ್ದಿ) ಎಂಬುವನನ್ನು ಪ್ರೀತಿಸುತ್ತಿದ್ದಳು. ಪಂಚಶಿಖನು ತಿಂಬುರುವಿನ ಗೃಹಕ್ಕೇ ಹೋಗಿ ಅತ್ಯಂತ ಮಧುರವಾಗಿ

No part of this publication is allowed for copying or reproducing. Copyright protected. Copyright infringement is punishable offence.

ಬಿಲ್ವವೀಣಾವಾದನವನ್ನು ಮಾಡಿದನು. ಬಹುವಾದ ಪರಿಣತಿಯಿಂದ ಮಧುರವಾಗಿ ಬಿಲ್ವವೀಣೆಯನ್ನು ನುಡಿಸುವುದರೊಂದಿಗೆ, ಬುದ್ಧನ ಜೀವನ ಗಾಥೆಗಳನ್ನೂ ಆತನ ಅರ್ಹತರನ್ನೂ ಒಳಗೊಂಡ ಗೀತೆಗಳನ್ನೂ ಪ್ರೇಮಗೀತೆಗಳನ್ನೂ ಹಾಡಿದನು. ಬುದ್ಧನ ಭೇಟಿಗಾಗಿ ಪಂಚಶಿಖನ ಸಹಾಯವನ್ನು ಅಪೇಕ್ಷಿಸಿದ ಶಕ್ರನು ಆತನ ಶ್ರದ್ಧೆ, ಸಹಾಯಗಳಿಂದ ಆನಂದಗೊಂಡು ಪಂಚಶಿಖನು ಸೂರ್ಯವಚಸಾಳನ್ನು ವಿವಾಹವಾಗಲು ಸಹಾಯವನ್ನು ಮಾಡಿದನು. ಆತನ ಗಾಯನದಿಂದಲೇ ಆತನತ್ತ ಒಲಿದಿದ್ದ ಸೂರ್ಯವಚಸಾಳೂ ಸುಲಭದಿಂದಲೇ ಒಪ್ಪಿಗೆ ನೀಡಿದಳು. ವೀಣಾವಾದಕ ಗಂಧರ್ವ ಪಂಚಶಿಖನು ಇಂದ್ರನ ದೂತನಾಗಿ ಬುದ್ಧನಲ್ಲಿ ಹೋದ ಸಂದರ್ಭಗಳ ಶಿಲ್ಪಗಳು ಭಾರ್ಹೂತ್ ನಲ್ಲಿ ಇರುವುದನ್ನೂ ಸೇರಿದಂತೆ ಶುಂಗರ, ಸಾತವಾಹನರ ಕಾಲದ ಹಲವು ಪ್ರಾಚೀನ ಬೌದ್ಧ ಸ್ತೂಪ ಶಿಲ್ಪಗಳಲ್ಲಿ ಚಿತ್ರಿಸಲ್ಪಟ್ಟಿವೆ.

ಗುಣಪಾಲ ಪಿಯಾಸೇನ ಮಲಾಲಸೇಕರರು ಬರೆದ ಪಾಲಿ ಭಾಷೆಯ ಶಬ್ದಕೋಶದಲ್ಲಿ ಬಿಲ್ವವೀಣೆಯನ್ನು ಕುರಿತಾಗಿ ಈ ಕೆಳಕಂಡಂತೆ ವಿವರಗಳಿವೆ :
ಬೆಳುವಪಾಂಡುವೀಣಾ — ಈ ವಾದ್ಯವು ಮೂಲತಃ ಮಾರಾ ಎಂಬುವವನದಾಗಿದ್ದು. ಈ ಮಾರನು ಏಳು ವರ್ಷಗಳ ಕಾಲ ಬುದ್ಧನ ನ್ಯೂನತೆಗಳನ್ನು ಕಂಡುಹಿಡಿಯಲೆಂದೇ ಕಾದುಕುಳಿತು ತನ್ನ ಸಮಯವನ್ನು ವ್ಯರ್ಥ ಮಾಡಿದ್ದನು. ಕಡೆಗೆ ಕೊರತೆಗಳೇ ಸಿಗದೆ ಆತನು ಜುಗುಪ್ಸೆಯಿಂದ ಹೊರಟುಹೋದನು. ಹೋಗುವಾಗ ಆತನ ಹೆಗಲ ಮೇಲಿದ್ದ ಬಿಲ್ವಪಾಂಡುವೀಣೆಯು ಜಾರಿ ಬಿದ್ದಿದ್ದು ಆತನಿಗೆ ತಿಳಿಯಲಿಲ್ಲ. ಸಕ್ಕನೆಂಬಾತನು ಈ ವಾದ್ಯವನ್ನು ಹೆಕ್ಕಿ ಪಂಚಶಿಖನಿಗಿತ್ತನು. ಆ ವಾದ್ಯದ ನಾದದ ಶಕ್ತಿಯು ಎಷ್ಟು ಪ್ರಗಲ್ಭವಾಗಿತ್ತೆಂದರೆ ಅದನ್ನು ಮೀಟಿದಾಗ ಹೊರಟ ಅತಿಮಧುರ ಸುಶ್ರಾವ್ಯ ಸಂಗೀತವು ನಾಲ್ಕು ತಿಂಗಳುಗಳ ಕಾಲ ಮಾರ್ದನಿಸುತ್ತಿತ್ತಂತೆ! ಬಿಲ್ವಪಾಂಡುವೀಣೆಯು ಉದ್ದದಲ್ಲಿ ಮೂರು ಗಾವುತ (ಪಾಲಿ ಭಾಷೆಯಲ್ಲಿ ಗಾವುತವೆಂದರೆ ಎರಡು ಮೈಲಿಗಳಿಗೂ ಸ್ವಲ್ಪ ಕಡಿಮೆ ದೂರದ, ಭೂಮಿಯ ದೂರದ ಅಳತೆ! ) ಗಳಿದ್ದು ಮೂವತ್ತು ಆಧಾರ ಪಟ್ಟಿಗಳಿದ್ದುವಂತೆ! ಸುಮಂಗಲಾ ವಿಲಾಸಿನಿ ಎಂಬ ಬುದ್ಧಘೋಷನ ದೀಘನಿಕಾಯದ ವ್ಯಾಖ್ಯಾನ ಗ್ರಂಥವು ಈ ವೀಣೆಯನ್ನು ಕುರಿತಾಗಿ ವಿವರಗಳನ್ನು ವಿಶದವಾಗಿ ನೀಡಿದೆಯೆಂದು ಜಿ. ಪಿ. ಮಲಾಲಸೇಕರರು ಹೇಳಿದ್ದಾರೆ. ಈ ವೀಣೆಯು ಬಿಲ್ವಹಣ್ಣಿನಂತೆ ತಿಳಿಹಳದಿಯದಾಗಿದ್ದು ಅದರ ಬುಡವು ಚಿನ್ನದ್ದಾಗಿದ್ದು ಅದರ ಕಾಂಡವು ನೀಲಮಣಿಗಳಿಂದ ಕೂಡಿದ್ದು, ತಂತಿಯು ಬೆಳ್ಳಿಯದಾಗಿತ್ತು. ವೀಣೆಯ ತಲೆ ಹಾಗೂ ತುದಿಗಳು ಬಹುಶಃ ಬಿಲ್ವ ಹಣ್ಣಿನ ಬುರುಡೆಯಿಂದ ಮಾಡಲ್ಪಟ್ಟಿದ್ದರಿಂದಲೂ ಹಣ್ಣಿನ ಅದೇ ಬಣ್ಣವನ್ನು ಹೊಂದಿದ್ದರಿಂದಲೂ ವೀಣೆಗೆ ಅದೇ ಹೆಸರು ಅನ್ವಯವಾಯಿತೆಂದೂ ಕೋಶಕಾರನ ಅಭಿಮತ.

**<u>ಜೈನಧರ್ಮದಲ್ಲಿ</u> —**
ಜೈನಧರ್ಮದಲ್ಲಿ ಗಂಧರ್ವರು ದಿವ್ಯಮಾನುಷರೂ ಸಂಗೀತಗಾರರೂ ಆಗಿರುತ್ತಾರೆಂದು ಹೇಳಲ್ಪಟ್ಟಿದೆ. ಜೈನಗ್ರಂಥಗಳಲ್ಲಿಯೂ ಗಾಂಧರ್ವ ಸಂಗೀತವನ್ನು ಲೌಕಿಕ ಗಾಯನವೆಂಬ ಅರ್ಥದಲ್ಲಿ ಪ್ರಯೋಗಿಸಿದೆ. ವಸುದೇವಹಿಂಡಿಯಲ್ಲಿಯೂ ಗಾಂಧರ್ವವೇದವನ್ನು ಉಲ್ಲೇಖಿಸಿ, ವಸಂತತಿಲಕಾ ಎಂಬುವಳ ಮನೋಹರ ನೃತ್ಯವನ್ನು ಸುದೀರ್ಘವಾಗಿ ವರ್ಣಿಸಿ, ಸುಗ್ರೀವ, ಜಯಗ್ರೀವರೆಂಬ ಸಂಗೀತಾಚಾರ್ಯರು, ನಾರದ ಮತ್ತು ತುಂಬುರೂ ಎಂಬ ಪೌರಾಣಿಕ ಗಾಂಧರ್ವಾಚಾರ್ಯರ ಉಲ್ಲೇಖಿಸಿದೆ. ಗರ್ಭಾವತರಣಜಿನಕಲ್ಯಾಣದಲ್ಲಿ ಸೌಧರ್ಮೇಂದ್ರನು ಗಂಧರ್ವಾಪ್ಸರೆಯರೊಡನೆ ಬಂದು ಸೂಚೀನೃತ್ತವನ್ನಾಡಬೇಕೆಂಬ ವಿವರವಿದೆ. ಜೈನಧರ್ಮದಲ್ಲಿ ಗಂಧರ್ವರು ಅಧಃಲೋಕ, ಮಧ್ಯಲೋಕ, ಊರ್ಧ್ವಲೋಕಗಳೆಂಬ ಮೂರು ಲೋಕಗಳನ್ನೂ ಸಂಚರಿಸಲು ಸಾಧ್ಯವಾಗುವಂತಹ ವ್ಯಂತರರ ಗುಂಪಿಗೆ ಸೇರಿದವರು. ಜೈನಧರ್ಮದಲ್ಲಿ ಗಂಧರ್ವರೂ ಸೇರಿದಂತೆ ವ್ಯಂತರರ ಗುಂಪಿಗೆ ಕಿನ್ನರ, ಕಿಂಪುರುಷ, ಮಹೋರಗ,ಯಕ್ಷ, ರಾಕ್ಷಸ. ಭೂತ, ಪಿಶಾಚರೂ ಸೇರಿದ್ದಾರೆ. ತಿಲಯೋಪಣ್ಣತ್ತಿಯಲ್ಲಿ ಹಾಹಾ, ಹುಹೂ, ನಾರದ, ತುಂಬರ, ವಾಸವ, ಕದಂಬ, ಮಹಾಸ್ವರ, ಗೀತರತಿ, ಗೀತಸಾರ, ವಜ್ರವಾನ್ ಎಂಬ ಹತ್ತು ಮಂದಿ ಗಂಧರ್ವರನ್ನು ಹೇಳಿದೆ. ಈ ಗಂಧರ್ವರು ಬಂಗಾರಬಣ್ಣದ ದೇಹವುಳ್ಳವರು. ತುಂಬರ ವೃಕ್ಷವನ್ನು ಅವರ ಚೈತ್ಯ ವೃಕ್ಷವನ್ನಾಗಿಟ್ಟುಕೊಂಡಿದ್ದಾರೆ. ಶ್ವೇತಾಂಬರ ಸಂಗ್ರಹಣೀತಂತ್ರದಲ್ಲಿ ಹಾಹಾ, ಹುಹೂ, ತುಂಬುರು, ನಾರದ, ಋಷಿವಾದಿಕ, ಭೂತವಾದಿಕ, ಕದಂಬ, ಮಹಾಕದಂಬ, ರೈವತ, ವಿಶ್ವಾವಸು, ಗೀತರತಿ, ಗೀತಯಶಸ್ ಎಂಬ ಹನ್ನೆರಡು ಗಂಧರ್ವರನ್ನು ಹೇಳಿದ್ದು, ಈ

No part of this publication is allowed for copying or reproducing. Copyright protected. Copyright infringement is punishable offence.

ಗಂಧರ್ವರು ಶ್ಯಾಮಲವರ್ಣದವರು, ಸುಂದರವಾದ ಅಂಗಸೌಷ್ಠವವುಳ್ಳವರು, ಸುಶಾರೀರ ಮಧುರಸ್ವನವುಳ್ಳವರು, ಕಿರೀಟ ಹಾರಾದಿಗಳಿಂದ ಅಲಂಕೃತರೂ ಆಗಿದ್ದರೆಂದು ವರ್ಣಿಸಿದೆ. ಈ ಗಂಧರ್ವರಿಗೆ ತುಂಬುರು ಮರವು ಚೈತ್ಯವೃಕ್ಷವಾಗಿದೆ. ಕ್ರಿ. ಶ. ಎರಡನೇ ಶತಮಾನದಲ್ಲಿ ರಚಿಸಲ್ಪಟ್ಟ ತತ್ತ್ವಾರ್ಥ ಸೂತ್ರ (4.10)ದಲ್ಲಿ ಗೀತರತಿ ಹಾಗೂ ಗೀತಯಶರು ತ್ರಿಲೋಕ ಸಂಚಾರಿಗಳಾದ ದಿವ್ಯಜನರೆಂದು ಹೇಳಲ್ಪಟ್ಟಿದೆ. ಜೈನಮತದಲ್ಲಿ ಪುನ್ನಾಟ ಜಿನಸೇನನು ತನ್ನ 'ಹರಿವಂಶಾಭ್ಯುದಯ ಪುರಾಣ ಸಂಗ್ರಹ' ದಲ್ಲಿ ಅದರ 19ನೆಯ ಪರ್ವದಲ್ಲಿ ವಸುದೇವನ ಸಭೆಯಲ್ಲಿನ ಒಂದು ಸಂದರ್ಭವನ್ನು ವಿಸ್ತರಿಸಿ ಅಲ್ಲಿ ಗಂಧರ್ವರ ಸೇನೆಯೆಂಬ ಹಾಡುಗಾತಿಯು ಬಲ್ಲ ಸಂಗೀತವನ್ನು ಕುರಿತು ಸುಮಾರು 130 ಶ್ಲೋಕಗಳಲ್ಲಿ ಸಂಗೀತಶಾಸ್ತ್ರವನ್ನು ಸಾಂಗೋಪಾಂಗವಾಗಿ ನಿರುಪಿಸಿದ್ದಾನೆ.

**<u>ಶಿಲ್ಪ - ಶಾಸನಗಳಲ್ಲಿ ಗಾಂಧರ್ವರು</u> —**

ಥೈಲಾಂಡ್, ಕಾಂಬೋಡಿಯಾ, ಇಂಡೋನೇಷ್ಯಾದಂತಹ ಆಗ್ನೇಯ ಏಷ್ಯಾ ರಾಷ್ಟ್ರಗಳನೇಕದರಲ್ಲಿ ಗಂಧರ್ವ, ಕಿನ್ನರರ ಶಿಲ್ಪಗಳು ಕೆತ್ತಲ್ಪಟ್ಟಿವೆ. ಕಾಂಬೋಡಿಯಾದಲ್ಲಿ 'ಅಪ್ಸರಾ' ಎಂಬ ಸುಂದರವಾದ ನೃತ್ಯವು ಇನ್ನೂ ಪ್ರಯೋಗದಲ್ಲಿದ್ದು, ಈ ನೃತ್ಯರೂಪಕದಲ್ಲಿ ಅಪ್ಸರೆಯರು ಮಾತ್ರವಲ್ಲದೆ ದೇವತೆಗಳ ಹಾಗೂ ರಾಕ್ಷಸರ ಪಾತ್ರಗಳೂ ಇವೆ! 'ಗಾಂಧರ್ವವೆಂಬ ಈ ಕಲ್ಪನೆಯು ಪ್ರಪಂಚದ ಅನೇಕ ದೇಶಗಳಿಗೆ ಹಬ್ಬಿವೆ. ಆದರೆ ಈ ಪ್ರಕ್ರಿಯೆಯಲ್ಲಿ ಕಾಲಾಂತರದಲ್ಲಿ ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡು ಅನೇಕ ಬದಲಾವಣೆಗಳನ್ನು ಹೊಂದಿವೆ. ಮಯೋನೇಸಿಯಾ ಗ್ರೀಕರು ಗಂಧರ್ವರನ್ನು ಗಂಧರಸ್ ಎಂದು ಕರೆಯುತ್ತಾರೆ. ಈ ಗಂಧರ್ವರ ರುಂಡವು ಮಾನವನದಾಗಿದ್ದು ಉಳಿದ ದೇಹವು ಅಶ್ವದ್ದಾಗಿರುತ್ತವೆ. ಭಾರತದ ತುಂಬುರುವಿನಂತೆಯೇ ಈ ಗಂಧರ್ವನ ಕೈಯಲ್ಲಿಯೂ, ಹಾಡುಗಾರಿಕೆಯ ಜೊತೆಯಲ್ಲಿ ನುಡಿಸುವ ಲೈರ್ ಎಂಬ ತಂತೀವಾದ್ಯವಿರುತ್ತದೆ. ಕೆಲವು ಸಂಶೋಧಕರು ಗಂಧರ್ವರ ಮೂಲವನ್ನು ಇಂಡೋ - ಇರಾನಿಯನ್, (=ಪಾರ್ಶ್ವೋತ್ತರದೇಶ) ಎಂದರೆ ಆರ್ಯರ ಕಾಲವೆಂದು ಹೇಳುತ್ತಾರೆ. ಏಕೆಂದರೆ ಅವರ ಜೋರೋಸ್ಟ್ರಿಯನ್ ಅವೆಸ್ತಾ ಗ್ರಂಥದಲ್ಲಿ ಇದೇ ಲಕ್ಷಣಗಳುಳ್ಳ ದಿವ್ಯ ಮಾನವರನ್ನು ಬಿಳಿಯ ಸೋಮದ ಸಮುದ್ರದಲ್ಲಿ ವಾಸವಿರುವ ಸಂಗೀತವನ್ನು ಬಲ್ಲ ಗಂಧರೇವರು ಎಂದು ಉಲ್ಲೇಖಿಸಿದೆ. ವಿಯೆಟ್ನಾಂನಲ್ಲಿ 13 ನೆಯ ಶತಮಾನದ ಬುದ್ಧ ದೇಗುಲಗಳಲ್ಲಿ ಗಂಧರ್ವರ ಶಿಲ್ಪಗಳಿವೆ.



Exotic costumes at the Apsara dance in the Angkor Mondial restaurant. (Siem Reap, Cambodia, Oct. 2008)

No part of this publication is allowed for copying or reproducing. Copyright protected. Copyright infringement is punishable offence.



The Royal Ballet of Cambodia at curtain call. This was a performance of a dance drama titled 'Apsara Mera' in Paris, France.

ಭಾರತದಾದ್ಯಂತ ಗಂಧರ್ವ, ಯಕ್ಷ, ಕಿನ್ನರ, ಅಪ್ಸರೆಯರ ಶಿಲ್ಪಗಳು ಇವೆ. ಕರ್ನಾಟಕದಲ್ಲಿ ಚಾಲುಕ್ಯ ಶೈಲಿಯ ರಚನೆಗಳಲ್ಲಿ ಈ ಶಿಲ್ಪಗಳನ್ನು ಮೊದಲು ಕಾಣುತ್ತೇವೆ. ವಿರೂಪಾಕ್ಷ ದೇವಾಲಯದ ನಂದಿ ಮಂಟಪ ಹಾಗೂ ಬಾದಾಮಿ ವೈಷ್ಣವ ಗುಹೆ, ಪಟ್ಟದ ಕಲ್ಲಿನ ವಿರೂಪಾಕ್ಷ ದೇವಾಲಯ, ಪಾಪನಾಥ ದೇವಾಲಯಗಳ ರಂಗ ಮಂಟಪಗಳಲ್ಲಿ ಅಪ್ಸರೆಯರು, ಯಕ್ಷಿಣಿ ಸ್ತ್ರೀಯರೆಂದು ನಂಬುವ ಸಾಲಭಂಜಿಕೆಯರ ಹಾಗೂ ಅವರ ಪತಿಗಳ ಶಿಲ್ಪವನ್ನು ನೋಡಬಹುದು. ಪೂರ್ಣ ಪ್ರಮಾಣದ ಗಂಧರ್ವ ದಂಪತಿಗಳ ಶಿಲ್ಪಗಳು ವಾದ್ಯಗಳನ್ನು ಹಿಡಿದು ನುಡಿಸುತ್ತಾ ಆಕರ್ಷಕ ಭಂಗಿಗಳಲ್ಲಿ ನರ್ತಿಸುವುದನ್ನು ಇಲ್ಲಿ ಗಮನಿಸಬಹುದು. ಗಂಧರ್ವಭಟ್ಟಾರಕ ದೇವಸ್ಥಾನವು ದಕ್ಷಿಣ ಕೋಸಲದೇಶದಲ್ಲಿದ್ದು ಸಿರ್ ಪುರ್ ನಲ್ಲಿ ಮಹಾನದಿಯ ದಡದಲ್ಲಿದೆ. ಈ ಈಶ್ವರನ ದೇವಾಲಯದಲ್ಲಿ ಇಂದಿಗೂ ಪೂಜಾ ಸೇವಾದಿಗಳು ನಡೆಯುತ್ತಿದ್ದು ಪ್ರಸಿದ್ಧವಾಗಿದೆ. ದೇವರ ಹೆಸರೇ ಹೇಳುವಂತೆ ಈ ಶಿವನು ಗಂಧರ್ವರ ಆರಾಧ್ಯದೈವವಾಗಿದ್ದು ಈ ಗಂಧರ್ವೇಶ್ವರನ ಲಿಂಗವು ಒಬ್ಬ ಗಂಧರ್ವನಿಂದಲೇ ಪ್ರತಿಷ್ಠಾಪಿಸಲ್ಪಟ್ಟಿದ್ದು ಮಾನವರು ಸ್ಥಾಪಿಸಿದ ಲಿಂಗಕ್ಕಿಂತಲೂ ಹೆಚ್ಚು ಪ್ರಭಾವಶಾಲಿಯಾಗಿದೆಯೆಂಬ ನಂಬುಗೆಯಿದೆ. ಪ್ರಸ್ತುತ ಈ ದೇವನು ಗಂಧೇಶ್ವರ ಎಂದೇ ಕರೆಯಲ್ಪಟ್ಟರೂ ಅಲ್ಲಿನ ಧ್ವಜಸ್ತಂಭದ ಮೇಲಿನ ಶಾಸನದಲ್ಲಿ ಸ್ಪಷ್ಟವಾಗಿ 'ಗಂಧರ್ವೇಶ್ವರ' ಎಂದೇ ಕೆತ್ತಲ್ಪಟ್ಟಿದೆ. ಗಂಧರ್ವರು ಸುಗಂಧಪ್ರಿಯರಾದ್ದರಿಂದ ಶಾಸನಗಳಲ್ಲಿ ಕೆತ್ತಲ್ಪಟ್ಟಂತೆಯೇ ಈ ದೇವರಿಗೂ ಪುರುಷಾಕೃತಿಯಷ್ಟು ದೊಡ್ಡದಾದ ಹೂ ಮಾಲೆಯನ್ನು ಇಂದಿಗೂ ಪೂಜೆಯಲ್ಲಿ ಸೇವೆಯಾಗಿ ಸಲ್ಲಿಸಲಾಗುತ್ತದೆ. ಗಂಧರ್ವರು ಶಿವತತ್ವಪರರೆಂಬ ಶಾಸ್ತ್ರಕಾರರ ಮಾತಿಗಿದು ಇಂಬುಕೊಡುವಂತಹದಾಗಿದೆ.



File:8th century Gandheshwara Shiva temple ithyphallic Nataraja, Sirpur monuments Chhattisgarh.jpg

No part of this publication is allowed for copying or reproducing. Copyright protected. Copyright infringement is punishable offence.

ಭಾರತದ ಅನೇಕ ಪ್ರಾಚೀನ ಶಾಸನಗಳಲ್ಲಿ ಗಾಂಧರ್ವವನ್ನು ಲೌಕಿಕಗಾನವೆಂದೇ ವ್ಯವಹರಿಸಲಾಗಿದೆ. ಶಾಸನಗಳಲ್ಲಿ ಉಲ್ಲೇಖವಿಲ್ಲದೆಯೂ ಅನೇಕಾನೇಕ ರಾಜರು ಗಾಂಧರ್ವವನ್ನೂ ಸೇರಿಸಿ ಬಹುವಿದ್ಯೆಗಳಲ್ಲಿ ಪರಿಣತರಾಗಿರುತ್ತಿದ್ದು, ಅನೇಕ ಶಾಸ್ತ್ರಗಳಲ್ಲಿ ಗ್ರಂಥಗಳನ್ನು ರಚಿಸಿದ್ದಲ್ಲದೆ, ಸಂಗೀತಶಾಸ್ತ್ರಗ್ರಂಥಗಳನ್ನೂ ತಾವೇ ರಚಿಸಿ, ಸಂಗೀತಶಾಸ್ತ್ರಕಾರರನ್ನು, ಸಂಗೀತಗಾರರನ್ನೂ ಪೋಷಿಸಿ, ಪ್ರೋತ್ಸಾಹಿಸಿ ಭಾರತೀಯ ಸಂಗೀತ ಪ್ರಪಂಚವನ್ನು ಶ್ರೀಮಂತಗೊಳಿಸಿದ್ದಾರೆಂಬುದನ್ನು ಅವರಿಂದ ರಚಿತವಾದ ಗ್ರಂಥಗಳಿಂದ ಅರಿಯಬಹುದು.

ಶಾಸನಗಳಲ್ಲಿ ಗಾಂಧರ್ವಕ್ಕೆ ಸಂಬಂಧಿಸಿದಂತೆ ಉಲ್ಲೇಖ ಮಾಡಿದವುಗಳಲ್ಲಿ ಕೆಲವು ಇಂತಿವೆ. —

1) ಸಮುದ್ರಗುಪ್ತನಿಗೆ ಕ್ರಿ. ಪೂ. ನಾಲ್ಕನೆಯ ಶತಮಾನದಲ್ಲಿ ಹರಿಷೇಣು ಪ್ರಶಸ್ತಿಯನ್ನು ರಚಿಸುವಾಗ ಅವನು ನಾರದತುಂಬುರುಗಳಂತೆ ಎಂದು ಹೇಳಿದೆ. (*Gupta inscriptions, ed. Fleet, J., No, 1,p,8)*

2) ಕ್ರಿ. ಪೂ. ಎರಡನೆಯ ಶತಮಾನದಲ್ಲಿ ಕಳಿಂಗ ರಾಜನಾದ ಖಾರವೇಲನನ್ನು ಹಾಥಿಗುಂಫ ಶಾಸನವು ಗಂಧರ್ವವೇದಬುಧನೆನ್ನುತ್ತದೆ. (*Halthi - gumpha Inscription of Kharavela, Epigraphia Indica, Vol. XX, P, 79).*

3) ಮಹಾಕ್ಷತ್ರಪ ರುದ್ರದಾಮನ್ ಜುನಗಢದ ಶಾಸನದಲ್ಲಿ 'ಶಬ್ದಾರ್ಥಗಾಂಧರ್ವನಾಯಾದ್ಯಾನಾಂ ಮಹತೀನಾಂ ಪಾರಣಧಾರಣ ವಿಜ್ಞಾನ ಪ್ರಯೋಗಾಪ್ತವಿಪುಲಕೀರ್ತಿನಾ' ಎಂದು ವರ್ಣಿತನಾಗಿದ್ದಾನೆ. *(Junagadh Inscription of Rudradhaman, Ibid., vol, VIII, P, 44, 1.13)*

4) ಕ್ರಿ. ಶ. ಐದನೆಯ ಶತಮಾನದಲ್ಲಿ ಕದಂಬರ ವಿಷ್ಣುಧರ್ಮ ಮಹಾರಾಜನನ್ನು ಆತನ ಸಂತತಿಯ ಕೃಷ್ಣವರ್ಮನು ಗಂಧರ್ವ, ಹಸ್ತಿ, ಧನುರ್ವೇದಗಳಲ್ಲಿ ಸಾಕ್ಷಾತ್ ಅರ್ಜುನನಿಗೆ ಸಮನೆಂದು ಹೊಗಳುತ್ತಾನೆ. ( *Epigraphia Carnatica, V, II, Bl, 121, P. 248.*

5) ಕ್ರಿ. ಶ. ಆರನೆಯ ಶತಮಾನದಲ್ಲಿ ಗಂಗರ ದುರ್ವಿನೀತನನ್ನು ನಲ್ಲಾಳ ತಾಮ್ರಪಟ ಶಾಸನವು ಗಾಂಧರ್ವವೇದ, ನಾಟ್ಯಶಾಸ್ತ್ರಗಳಲ್ಲಿ ತುಂಬುರು, ನಾರದ, ಭರತ, ಕಂಬಲಾಚಾರ್ಯರಿಗೆ ಸಮನೆಂದು ವರ್ಣಿಸಿದೆ. *(Nallala Plates. IV a, 1, 27).*

6) ಕ್ರಿ. ಶ. ಏಳನೆಯ ಶತಮಾನದಲ್ಲಿ ಪಲ್ಲವರ ಮೊದಲನೆಯ ಮಹೇಂದ್ರವರ್ಮನನ್ನು ಮಾಮಂಡೂರು ಶಾಸನವು ಗಾಂಧರ್ವವೇದ ನಿಷ್ಣಾತನೆಂದು ಹೊಗಳುತ್ತದೆ. *( South Indian Inscriptions, IV, P. 126.)*

7) ಪಾಂಡ್ಯರ ದೊರೆಯಾದ ಜಾತವರ್ಮನ್ ಸುಂದರಪಾಂಡ್ಯನ ಆಳ್ವಿಕೆಯಲ್ಲಿ ಗಾಯಕಿಯರು ಗಂಧರ್ವಿಯರು ಎಂದು ಕರೆಯಲ್ಪಡುತ್ತಿದ್ದರು. (M. E. R. 1936 - 43 Pt II para 53, 277 of 1941 - 1942).

8) ಎಂಟನೇ ಶತಮಾನದ ಪಟ್ಟದಕಲ್ಲಿನ ಶಾಸನದಲ್ಲಿ ಹಲವು 'ಗಾಂಧರ್ವರ್ಗೆ', ಎಂದರೆ ಅಲ್ಲಿಯ ವಿರೂಪಾಕ್ಷ ದೇವಾಲಯದ ಗಾಯಕರಿಗೆ ದತ್ತಿ ಕೊಟ್ಟ ವಿಷಯವಿದೆ. ದತ್ತಿ ಸ್ವೀಕರಿಸಿದ ಗಾಯಕರಲ್ಲಿ ದುಗ್ಗಮಾರನ ಹೆಸರಿದೆ.

9)ದೇವದಾಸಿಯರು ಅನೇಕ ದೇವಸ್ಥಾನಗಳ ಭಾಗವಾಗಿದ್ದು ನೃತ್ಯ ಗೀತ ವಾದ್ಯಗಳಲ್ಲಿ ನಿಷ್ಣಾತರಾಗಿರುತ್ತಿದ್ದರು. ಕ್ರಿ. ಶ. 802ರ ಒಂದು ತಾಮ್ರಪಟದಲ್ಲಿ ಜಿನಾಲಯವೊಂದರ ವಾರವಿಲಾಸಿನಿಯರ 'ನೃತ್ಯ, ಗೀತ, ವಾದ್ಯ' ಗಳಿಗಾಗಿ ದತ್ತಿಕೊಡಲಾಗಿದೆ (E.C. IX. NI. 61) ಇವರಲ್ಲದೆ ಕೆಲವು ಕಡೆ ಹರೆ ಬಾರಿಸುವವರಿಗೇ ಪ್ರತ್ಯೇಕ ದತ್ತಿಕೊಟ್ಟಿದೆ. 'ವಿದ್ಯಾದಾನಕ್ಕೆ ಮತ್ತರು ಪನ್ನೆರಡು ಪರೆಗಾರರ್ಗೆ ಮ(ತ್ತರು) ಹತ್ತು ಗಾಂಧರ್ವಿಗರ್ಗೆ….' (KI, I. No. 17,1055A.D). ಗಾಂಧರ್ವಿಗರು ಎಂದರೆ ಹಾಡುವವರು.

10) ಎರಡನೆಯ ಚಾಲುಕ್ಯ ಭೀಮನ (ಕ್ರಿ. ಶ. 892-922) ಆಸ್ಥಾನದಲ್ಲಿ ಚೆಲ್ಲವ್ವನೆಂಬ ನರ್ತಕಿಯು ಇದ್ದಳು. ಈಕೆ ನೃತ್ಯಗೀತವಾದ್ಯದಲ್ಲಿ ಪಾರೀಣಳಾದ ತಂಡಕ್ಕನೆಂಬ ನರ್ತಕಿಯ ಮೊಮ್ಮಗಳು. ತಂಡಕ್ಕನಿಗೆ 'ಸಮಸ್ತ ಗಾಂಧರ್ವವಿದ್ಯಾ ವೇದಿನಿ' ಎಂಬ ಬಿರುದು ಇತ್ತು. (The journal of Telugu Academy, vol. XI, p.23 and A. ఎ. VII pp. 172 - 192; see for details, Arudra, "Kalavantulu…" op. cit. p. 49)

ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟ್, ಧಾರವಾಡದವರು ಪ್ರಕಟಿಸಿರುವ Gandharvas and Kinnaras in Indian Iconography ಎಂಬ ತಮ್ಮ ಸಂಶೋಧನಾತ್ಮಕ ಪುಸ್ತಕದಲ್ಲಿ ಶ್ರೀ ಆರ್. ಎಸ್.

No part of this publication is allowed for copying or reproducing. Copyright protected. Copyright infringement is punishable offence.

ಪಂಚಮುಖಿಯವರು ಗಂಧರ್ವ - ಕಿನ್ನರರ ಕುರಿತಾದ ಶಿಲ್ಪಗಳು ಶಾಸನಗಳನ್ನು ಕುರಿತು ವಿಸ್ತೃತವಾಗಿ ಬರೆದಿದ್ದಾರೆ.

**ಈಗಲೂ ಗಂಧರ್ವ, ಕಿನ್ನರ, ಯಕ್ಷರು ಇದ್ದಾರೆಯೇ !? —**
ಈ ಕುತೂಹಲಕರವಾದ ಪ್ರಶ್ನೆಗೆ ಹೌದು, ಈಗಲೂ ಈ ಹೆಸರಿನ ಜನಾಂಗದವರು, ಅದರಲ್ಲಿಯೂ ಗಾಯನ ಪರಂಪರೆಯಿರುವವರು ಇನ್ನೂ ಇದ್ದಾರೆ ಹಾಗೂ ಹಲವಾರು ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಲಾ ಪರಂಪರೆಗಳು ಈ ಜನಾಂಗಗಳ ಹೆಸರಿನಲ್ಲಿವೆ ಎಂದೇ ಉತ್ತರವನ್ನೀಡಬೇಕಾಗಿದೆ. ನಮ್ಮ ಭಾರತೀಯ ಚರಿತ್ರೆಯು ಪುರಾಣಗಳಲ್ಲಿಯೂ ಅಡಗಿವೆ. ಈ ನಿಟ್ಟಿನ ಚಿಂತನೆಯ ಮೂಲಕವಾಗಿ ಸಂಶೋಧನೆಗಳನ್ನು ಮಾಡಿ ಡಿ. ಡಿ. ಕೋಸಾಂಬಿ, ರೋಮಿಲಾ ಥಾಪರ್, ದೇವೀಪ್ರಸಾದ ಚಟ್ಟೋಪಾಧ್ಯಾಯ, ವಾಶ್ ಎಡ್ವರ್ಡ್ ಹೇಲ್ ಮುಂತಾದ ಸಂಶೋಧಕರು ಪುರಾಣಗಳನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕು ಎಂಬ ವಿಧಾನಗಳನ್ನು ಹೇಳಿದ್ದಾರೆ. ವೇದಗಳ ಕಾಲದಲ್ಲಿ ವೈದಿಕ ಜನಾಂಗಗಳು ಮಾತ್ರವಲ್ಲದೆ ಅವೈದಿಕ ಇತರ ಜನಾಂಗಗಳೂ ವೇದ, ಪುರಾಣ, ರಾಮಾಯಣ, ಮಹಾಭಾರತ, ಬೃಹತ್ಕಥಾಮಂಜರಿಗಳಂತಹ ಸಾಹಿತ್ಯಗಳಲ್ಲಿ ಕಂಡುಬರುತ್ತದೆ. ಇವರಲ್ಲಿ ರಾಕ್ಷಸ ಶಬ್ದದ ತದ್ಭವ ರೂಪವಾಗಿ ರಕ್ಕಸವೆಂದು ಮಾತ್ರ ಹೇಳದೆ ಎರಡು ಜನಾಂಗಗಳನ್ನು ಪ್ರತ್ಯೇಕವಾಗಿಯೇ ಉಲ್ಲೇಖಿಸಿರುವ ಸಂದರ್ಭಗಳಿವೆ. ಪಾಣಿ, ನಿಷಾದ, ಕಿರಾತ, ಬಾಹ್ಲೀಕ, ಪಿಶಾಚ, ದಾನವ, ದೈತ್ಯ, ನಾಗ, ಮ್ಲೇಚ್ಛ, ಯವನ, ಹೀಗೆ ಅನೇಕ ಜನಾಂಗಗಳ ಪಟ್ಟಿಯೇ ದೊರೆಯುತ್ತದೆ. ಯಕ್ಷ ಜನಾಂಗದ ಕುರಿತು 'YAKSHAS' ಎಂಬ ತಮ್ಮ ಗ್ರಂಥದಲ್ಲಿ ಆನಂದಕೆಂಟಿಶ್ ಕುಮಾರಸ್ವಾಮಿಯವರು ವಿಸ್ತೃತವಾಗಿ, ಆಳವಾಗಿ ಸಂಶೋಧನಾ ವಿವರಗಳನ್ನು ಬರೆದಿದ್ದಾರೆ. ಯಕ್ಷಗಾನದ ವಿದ್ವಾಂಸರು ಈ ಗ್ರಂಥವನ್ನು ತಮ್ಮ ಅಧ್ಯಯನಕ್ಕೆ ಉಪಯೋಗಿಸಲೇ ಬೇಕಾದ ಗ್ರಂಥವಿದು. ಯಕ್ಷ ಜನಾಂಗವು ಈಗಲೂ ಜನಪದ ದೈವಿಕವೈದ್ಯರ ರೀತಿ ನೇಪಾಳದಲ್ಲಿಯೂ, ಯಕ್ಷಗಾನ ಕಲಾವಿದರಾಗಿ ಆಂಧ್ರಪ್ರದೇಶದಲ್ಲಿಯೂ, ಆದಿವಾಸಿಗಳಂತೆ ಸಿಲೋನ್ ನಲ್ಲಿಯೂ ಜೀವಿಸುತ್ತಿದ್ದಾರೆ. ಪಿಶಾಚ ಶಬ್ದ, ಪೈಶಾಚಿಕ ಭಾಷೆಯನ್ನು ಕುರಿತು ಪ್ರಗಲ್ಭ ಸಂಶೋಧನಾತ್ಮಕ ಪೀಠಿಕೆಯನ್ನು ಶ್ರೀ ಎ. ಆರ್ ಕೃಷ್ಣಶಾಸ್ತ್ರಿಗಳು ತಮ್ಮ 'ಕಥಾಮೃತ' ಗ್ರಂಥದಲ್ಲಿ ಬರೆದಿದ್ದಾರೆ. ಈ ಜನಾಂಗವು ಕಾಶ್ಮೀರ - ಜಮ್ಮುವಿನ ಬಳಿ ಇದೆ. ನಾಗರ ಬಗ್ಗೆ ವಿಸ್ತೃತವಾಗಿ ಶ್ರೀ ಗೋವಿಂದ ಪೈಗಳು ಹೇಳಿದ್ದಾರೆ.

ಮೇಲೆ ಹೇಳಿದುದರಲ್ಲಿ ಅನೇಕ ಜನಾಂಗಗಳು ದುಷ್ಟರೆಂದೂ ಕ್ರೂರಿಗಳೆಂದೂ ವೈದಿಕ ಜನಾಂಗಗಳಿಗೆ ತೊಂದರೆಯನ್ನು ನೀಡುತ್ತಿದ್ದರೆಂದೂ ಹೇಳಲ್ಪಟ್ಟಿದೆ. ನಿಷಾದರು ಬೇಡರ ಜನಾಂಗದವರು. ಅಸುರ ಎಂಬ ಜನಾಂಗವು ಇಂದಿಗೂ ಜಾರ್ಖಂಡ್, ಬಿಹಾರ ಹಾಗೂ ಮಧ್ಯಪ್ರದೇಶಗಳಲ್ಲಿ ಜೀವಿಸುತ್ತಿದ್ದಾರೆಂದೂ ಇವರು ದ್ರಾವಿಡ ಜನಾಂಗದಂತೆಯೇ ರೂಪವುಳ್ಳವರೆಂದೂ ಕಬ್ಬಿಣವನ್ನು ಗಣಿಯಿಂದ ತೆಗೆದು ಕುಲುಮೆಯಲ್ಲಿ ಕರಗಿಸುವ ಸಾಂಪ್ರದಾಯಿಕ ಕಲೆಗಾರಿಕೆಯನ್ನೇ ಕಸುಬಾಗಿ ಉಳ್ಳವರೆಂದೂ ಸಂಶೋಧಕರು ಹೇಳುತ್ತಾರೆ. ಕಿನ್ನರ ಅಥವಾ ಕಿನ್ನೌರ ಜನಾಂಗವೂ ಹಿಮಾಲಯದ ತಪ್ಪಲಿನ ಪ್ರದೇಶಗಳಲ್ಲಿ ಬಹು ಅಲ್ಪಸಂಖ್ಯಾತರಾಗಿ ಜೀವಿಸಿದ್ದಾರೆ. ಹಿಮಾಚಲ ಪ್ರದೇಶದಲ್ಲಿ ಕಿನ್ನವುರ್ (= ಕಿನ್ನರ) ಎಂಬ ಜಿಲ್ಲೆಯಿದೆ. ಅವರು ಅಶ್ವಗಳನ್ನು ಸಾಕುತ್ತಿದ್ದರಿಂದಲೂ ಆ ವಿದ್ಯೆಯಲ್ಲಿ ಬಹಳ ನುರಿತವರಾಗಿದ್ದರಿಂದಲೂ ಅವರಿಗೆ ಅಶ್ವದ ತಲೆಯೇ ಇರುವುದೆಂಬ ಕಲ್ಪನೆಯು ಉಂಟಾಗಿರಬಹುದಾದ ಸಾಧ್ಯತೆ ಇವೆ.

ವಾಲ್ಮೀಕಿ ರಾಮಾಯಣವು ಶೈಲೂಷರೆಂಬ ಗಾಂಧಾರದ ರಾಜರು ಶೈಲೂಷಗಂಧರ್ವರ ಪರಂಪರೆಯವರು ಎಂದು ಉಲ್ಲೇಖಿಸಿದೆ. (ಉತ್ತರಖಂಡ. 100) ಭಾರತದ ವಾಯವ್ಯದಲ್ಲಿರುವ ಶೈಲೂಷರ ಪ್ರದೇಶವು ಗಾಂಧಾರದೇಶಕ್ಕೆ(ಇಂದಿನ ಆಫ್ಘಾನಿಸ್ತಾನದ ಬಳಿ) ಪರಸ್ಪರವಾಗುತ್ತದೆ. ರಾಮನ ಸಹೋದರನಾದ ಭರತ ಹಾಗೂ ಅವನ ಪುತ್ರರಾದ ತಕ್ಷ ಹಾಗೂ ಪುಷ್ಕಲರು ಶೈಲೂಷರನ್ನು ಸೋಲಿಸಿದರು. ಪುಷ್ಕಲವತಿ ಹಾಗೂ ತಕ್ಷಶಿಲೆಗಳು ಭರತನ ಪುತ್ರರ ಹೆಸರಾಗಿ ಇಟ್ಟವೆಂಬ ಪ್ರತೀತಿಯಿದೆಯೆಂದು ಈ ಮೊದಲೇ ಹೇಳಿದೆ. ಮಹಾಭಾರತ ಹಾಗೂ ಪುರಾಣಗಳಲ್ಲಿ ಗಂಧರ್ವಪುರ, ಗಂಧರ್ವನಗರ ಇತ್ಯಾದಿಯಾಗಿ ಗಂಧರ್ವರ ನಾಡಾಗಿ ಉಲ್ಲೇಖಿಸಿರುವ ಪ್ರದೇಶಗಳು ಭಾರತದ ಆಗ್ನೇಯ, ದಕ್ಷಿಣ ಟಿಬೆಟ್, ಸರಸ್ವತೀ ನದಿಯ ಮುಖ್ಯ ಪಾತ್ರದ ತಟಗಳಲ್ಲಿ (ಪಶ್ಚಿಮ ರಾಜಸ್ತಾನ)

Copyright Protected

ಮತ್ತು ಸೌರಾಷ್ಟ್ರ (ಸೂರತ್) ಪ್ರದೇಶಗಳಾಗಿವೆ. ಬಲರಾಮನು ತನ್ನ ತೀರ್ಥಯಾತ್ರೆಯ ಸಮಯದಲ್ಲಿ ಬತ್ತಿದ ಸರಸ್ವತೀ ನದಿಯ ತಟದಲ್ಲಿ ಕೆಲವು ಗಂಧರ್ವರು ಬೀಡು ಬಿಟ್ಟಿದ್ದನ್ನು ನೋಡಿದ್ದಾಗಿ ಉಲ್ಲೇಖಿಸಿದೆ. ಹಾಗೆಯೇ ಮಹಾಭಾರತವು ಗಂಧರ್ವರು ಹಿಮಾಲಯದ ಉತ್ತರದಲ್ಲಿ ದೇವ - ಯಕ್ಷರೊಡನೆ ಇದ್ದುದಾಗಿ ಉಲ್ಲೇಖಿಸಿದೆ. ಇದೇ ಸ್ಥಳದಲ್ಲಿ ಯಕ್ಷ ಜನಾಂಗದವರು ಅಲ್ಪಸಂಖ್ಯಾತರಾಗಿ ಈಗಲೂ ಇದ್ದಾರೆಂದು ಆಗಲೇ ಉಲ್ಲೇಖಿಸಿದೆ. ಅರ್ಜುನನು ತನ್ನ ಚೈತ್ರ ಯಾತ್ರೆಯ ಸಮಯದಲ್ಲಿ ಕೆಲವು ಗಂಧರ್ವನಾಡುಗಳನ್ನು ಗೆದ್ದುದಾಗಿ ಹೇಳಿದೆ. ಗಂಧರ್ವ ಯಕ್ಷ ಕಿನ್ನರ ಕಿಂಪುರುಷಾದಿಗಳು ಹಿಮಾಲಯ ಪರ್ವತ ತಪ್ಪಲಿನಲ್ಲಿ ವಾಸ ಮಾಡುತ್ತಿದ್ದ ಸ್ಥಳೀಯ ಜನಾಂಗ. ನೇಪಾಳದಲ್ಲಿ ಈಗಲೂ ಗಾಯನೆ ಅಥವಾ ಗಂಧರ್ವರೆನ್ನುವ ಸಂಗೀತಗಾರ ಜನಾಂಗವೊಂದಿದ್ದು ಶತಮಾನಗಳಿಂದ ಇವರು ಗಾಯನ ವಾದನವನ್ನು ಉದ್ಯೋಗವಾಗಿಟ್ಟುಕೊಂಡಿದ್ದಾರೆ. ಗಂಧರ್ವ್ ವಿಕಿಪೀಡಿಯಾವು ಉತ್ತರಭಾರತದಲ್ಲಿ ಗಂಧರ್ವ್ ಎನ್ನುವ ಜನಾಂಗವೊಂದಿದೆಯೆಂದೂ ಇವರಲ್ಲಿ ಹಲವರ್ ಜಾಟ್ ಜನಾಂಗಕ್ಕೆ ಸೇರುತ್ತಾರೆಂದೂ ಹೇಳಿದೆ. ಈ ಜನಾಂಗವು ಅತಿಪ್ರಾಚೀನದ್ದೆಂದೂ ಇವರ ಉಲ್ಲೇಖವು ಪ್ರಾಚೀನ ಸಂಸ್ಕೃತ ಸಾಹಿತ್ಯಗಳಲ್ಲಿಯೇ ಇವೆಯೆಂದೂ, ಇವರು ದೇವತೆಗಳ ಪ್ರೀತ್ಯರ್ಥವಾಗಿ ಹಾಡುತ್ತ, ನರ್ತಿಸುತ್ತ ಇದ್ದವರೆಂದೂ ಹೇಳುತ್ತದೆ. ಈ ಜನಾಂಗದವರಲ್ಲಿ ಮುಖ್ಯ ಗೋತ್ರಗಳು ಅರಖ್, ಸೀತಲ್, ರಾಮ್ಸಿ, ಶಾಹಿಮಲ್, ಹೈವಾನ್, ಪಂಚ್ ಭೈಯ್ಯಾ, ಮತ್ತು ಸೋಮಾನವೆಂಬವುಗಳು. ಈ ಗಂಧರ್ವ ಜನಾಂಗವು ಮುಖ್ಯವಾಗಿ ಅಲಹಾಬಾದ್ (=ಪ್ರಯಾಗ್ ರಾಜ್), ವಾರಾಣಸಿ ಭಾಗಗಳಲ್ಲಿಯೇ ಹೆಚ್ಚು ವಾಸಿಸುತ್ತಿದ್ದಾರೆ. ಹಿಂದೀ ಮತ್ತು ಭೋಜಪುರಿ ಭಾಷೆಗಳನ್ನು ಮಾತನಾಡುತ್ತಾರೆ. ಇವರು ಸಾಮಾನ್ಯವಾಗಿ ಪಾರಂಪರಿಕವಾಗಿಯೇ ಗಾಯಕ - ವಾದಕರಾಗಿದ್ದು ಇವರನ್ನು ನರ್ತಕಿಯರು (ನಾಚ್) ತಮ್ಮ ನರ್ತನಕ್ಕೆ ಗಾಯಕರಾಗಿ ನೇಮಿಸಿಕೊಂಡು ತಮ್ಮ ಉತ್ಪತ್ತಿಯ ಅರ್ಧಾಂಶವನ್ನು ನೀಡುತ್ತಿದ್ದರು. ಆದರೆ ಈಗ ಇವರು ವಿಧಿಯಿಲ್ಲದೆ ತಮ್ಮ ಪಾರಂಪರಿಕ ವಿದ್ಯೆಯನ್ನು ಕೈಬಿಟ್ಟು ಹೊಟ್ಟೆಪಾಡಿಗಾಗಿ ಕೃಷಿ ಕಾರ್ಮಿಕ ಉದ್ಯೋಗವನ್ನು ಅರಸಿ ಹೋಗುತ್ತಿದ್ದಾರೆ.

'ಗಂಧರ್ವನ್ ಪಾಟ್ಟು' (=ಗಂಧರ್ವನ ಹಾಡು) ಎನ್ನುವುದು ಕೇರಳದ ಧಾರ್ಮಿಕ ಕಲೆಗಳಲ್ಲಿ ಒಂದು. ಇದು ವಣ್ಣಾನ್ ಸಮುದಾಯದವರು ಮಾಡುವಂತಹದು. ಇವರಲ್ಲಿಯೂ ಅನೇಕ ಉಪಪಂಗಡಗಳಿವೆ. ತೆಯ್ಯಂ ಅಥವಾ ತೆಯ್ಯಾಟ್ಟಂ ಉತ್ತರ ಕೇರಳವಾದ ಕಾಸರಗೋಡು (ಕೊಲತನಾಡು) , ಕುಂಬಳೆ, ಕಣ್ಣೂರು, ಮತ್ತು ಕೊಡಗು ಜಿಲ್ಲೆಗಳಲ್ಲಿ ಪ್ರಚಲಿತವಿರುವ ಧಾರ್ಮಿಕ ಸಂಸ್ಕಾರಗಳನ್ನೊಳಗೊಂಡ ಪ್ರಸಿದ್ಧ ಧಾರ್ಮಿಕನೃತ್ಯ ಕಲೆ. ಶತಶತಮಾನಗಳಷ್ಟು ಹಳೆಯದಾದ ಸಂಪ್ರದಾಯ, ಪರಂಪರೆ ಮತ್ತು ರೂಢಿಗಳೊಂದಿಗೆ ಬಳಕೆಯಲ್ಲಿರುವ ವಿಧಿಗಳು, ಕಟ್ಟುಕಟ್ಟಲೆಗಳನ್ನು ಉಳ್ಳದ್ದಾಗಿದೆ. ತೆಯ್ಯಂ ಎಂಬುವುದು ದೈವಂ ಎಂಬ ಸಂಸ್ಕೃತ ಶಬ್ದದ ಮಲಯಾಳದ ತದ್ಭವ. ವಣ್ಣಾನ್ ಬುಡಕಟ್ಟು ಜನರ ನೃತ್ಯ ಮತ್ತು ಸಂಗೀತದ ಅಪರೂಪ ಸಂಯೋಜನೆಯಾಗಿದ್ದು ಇದು ಇಲ್ಲಿನ ಪ್ರಮುಖ ವೈಶಿಷ್ಟ್ಯತೆಗಳನ್ನು ಪ್ರತಿಪಾದಿಸುತ್ತದೆ. ತೆಯ್ಯಂನಲ್ಲಿ ಸುಮಾರು 400 ವಿಧಗಳಿವೆ ಎಂದು ವಿದ್ವಾಂಸರು ಹೇಳುತ್ತಾರೆ. ತೆಯ್ಯುಂನ ಗಂಧರ್ವನ್ ಪಾಟ್ಟುವಿನಲ್ಲಿ ಐದು ವಿಧಗಳಿವೆ. ಅವು, ರುಧಿರಕ್ಕಳಿ, ವರವಕ್ಕಳಿ, ದೇವತೆ, ಮೆಕ್ಕರುವಾಳ್ ಹಾಗೂ ಗಂಧರ್ವನ್. ಗಂಧರ್ವನ್ ಪಾಟ್ಟುವು ದೈವದ ಆಶೀರ್ವಾದವನ್ನು ಪಡೆಯುವ ಉದ್ದೇಶಕ್ಕಾಗಿ ಪ್ರಯೋಗಿಸುವಂತಾದ್ದಾಗಿದ್ದು ಈ ಧಾರ್ಮಿಕ ಕಲೆಯು 'ಕಾವು' ವಿನ ಕಲಂಪಾಟ್ಟುವಿನ ಶೈಲಿಯಲ್ಲಿರುತ್ತದೆ. ( ಕಾವುಮಾಟ್ಟಂ — ಇದು ಕೇರಳದ ಸಾಂಪ್ರದಾಯಿಕ ಧಾರ್ಮಿಕ ವಿಧಿಗಳಲ್ಲೊಂದಾಗಿದ್ದು ನಾಗದೇವತೆಗಳನ್ನು ತಮ್ಮ ತಾಣಗಳಿಂದ ಹೊರಗೆ ತಂದು ಚಿತ್ರಕೂಟದಲ್ಲಿ ಸ್ಥಾಪಿಸಿ ವಿಶೇಷ ಪೂಜೆಗಳನ್ನು ನೆರವೇರಿಸುವ ವಿಧಿ). ಪ್ರಾಚೀನದಲ್ಲಿ ಧಾರ್ಮಿಕವಿಧಿಯಾದ ಈ ಕಲೆಯು ಗರ್ಭಿಣಿ ಸ್ತ್ರೀಯರಿದ್ದ ಮನೆಗಳಲ್ಲಿ, ಗರ್ಭಿಣಿ ಸ್ತ್ರೀಯರಿಗೂ, ಗರ್ಭಸ್ಥ ಶಿಶುವಿಗೂ ಉಂಟಾಗಬಹುದಾದ ಪ್ರೇತಪಿಶಾಚ ಬಾಧೆಗಳ ನಿವೃತ್ತಿಗಾಗಿ ಪ್ರಯೋಗಿಸಿ ಆಚರಿಸಲ್ಪಡುತ್ತಿತ್ತು. ಗಂಧರ್ವನ್ ಪಾಟ್ಟುವಿಗೆ ಪುಲ್ಲುವೀಣಾ ಮತ್ತು ಪುಲ್ಲುವಕ್ಕುಡಂ ವಾದ್ಯಗಳನ್ನು ಸಹವಾದನಗಳಾಗಿ ನುಡಿಸುತ್ತಾರೆ. ಇದರ ಅಂತರ್ಜಾಲ ಕೊಂಡಿಯೊಂದನ್ನು ಲೇಖನದ ಕಡೆಯಲ್ಲಿ ನೀಡಲಾಗಿದೆ.

ಮಣಿಪುರಿಯ ಕಣಿವೆಯ ಸ್ಥಳೀಯ ದಂತಗಾಥೆಗಳ ಪ್ರಕಾರ, ಮಣಿಪುರದ ಜನರೂ, ಅಲ್ಲಿನ ಸ್ಥಳೀಯ ನೃತ್ಯಕಾರರು ರಾಮಾಯಣ ಮಹಾಭಾರತಗಳಲ್ಲಿ ಉಲ್ಲೇಖಿಸಲ್ಪಟ್ಟ ಗಂಧರ್ವ ಜನಾಂಗದ ಪರಂಪರೆಯವರು ಎಂದೇ ಪರಿಗಣಿಸಲ್ಪಡುತ್ತಾರೆ ಹಾಗೂ ತಮ್ಮನ್ನು ದೇವತೆಗಳ ಆಸ್ಥಾನದಲ್ಲಿ ಹಾಡಿ-ಕುಣಿಯುವ ಗಂಧರ್ವರ ವಂಶಸ್ಥರೆಂದೇ ನಂಬುತ್ತಾರೆ. ಮಣಿಪುರದ ಪ್ರಾಚೀನ

No part of this publication is allowed for copying or reproducing. Copyright protected. Copyright infringement is punishable offence.

ಸಾಹಿತ್ಯಕೃತಿಗಳಲ್ಲಿ ಈ ಪ್ರದೇಶವನ್ನು ಗಂಧರ್ವದೇಶವೆಂದೇ ಕರೆಯಲಾಗಿದೆ. ಮಣಿಪುರಿ ನೃತ್ಯಪದ್ಧತಿಯು ಮಧ್ಯಯುಗದಿಂದಲೇ ಬಂದದ್ದೆಂದೂ ಹೇಳುತ್ತಾರೆ. ಅಲ್ಲಿನ ವಿಷ್ಣುದೇವಾಲಯಗಳಲ್ಲಿ ಸಂಗೀತ - ನೃತ್ಯಾದಿ ಕಲೆಗಳು ಪ್ರಾಚೀನದಿಂದಲೇ ತಲತಲಾಂತರದಿಂದ, ಪರಂಪರಾನುಗತವಾಗಿ ಮೌಖಿಕವಾಗಿಯೇ ಬೋಧಿಸಲ್ಪಟ್ಟಿವೆ. ಪಾರ್ವತಿಯಿಂದ ಲಾಸ್ಯವನ್ನು ಕಲಿತ ರಾಕ್ಷಸರಾಜ ಬಾಣನ ಪುತ್ರಿ ಉಷಾದೇವಿಯೇ ಮಹಿಳೆಯರಿಗಾಗಿ ಹೊಸ ನೃತ್ಯಶೈಲಿಯನ್ನು ರಚಿಸಿ ಅದನ್ನು ಮಣಿಪುರದ ಮಹಿಳೆಯರಿಗೆ ಹೇಳಿಕೊಟ್ಟಳು ಎಂಬುದು ಇಲ್ಲಿಯ ನಂಬಿಕೆ. ಮಹಾರಾಜ, ರಾಜರ್ಷಿ, ಭಕ್ತವೈಷ್ಣವನಾಗಿದ್ದ ಭಾಗ್ಯಚಂದ್ರನ ಕಾಲದಲ್ಲಿ ಮಣಿಪುರದಲ್ಲಿ ನೃತ್ಯಕಲೆಗೆ ರಾಸಲೀಲೆಯು ಸೇರಿಕೊಂಡಿತು. ರಾಸಲೀಲೆಯ ನೃತ್ಯಪ್ರಕಾರವನ್ನು ಪ್ರಾರಂಭಿಸಿದ ಶ್ರೇಯಸ್ಸು ಆತನಿಗೇ ಸಲ್ಲುತ್ತದೆ. ನೂಪಾ, ಪುಂಗ್ ಚೋಲಮ್, ಖಾಂಬಾ ಥೋಯ್ಬಿ, ಧೋಲ್ ಚೋಲಮ್, ಮಣಿಪುರಿ ನೃತ್ಯ ಪ್ರಕಾರದ ಪ್ರಮುಖ ಉಪವಿಭಾಗಗಳು. ಇಲ್ಲಿನ ಹಿಂದು ದೇವಸ್ಥಾನಗಳಲ್ಲಿ ಗಂಧರ್ವರ ಶಿಲ್ಪಗಳನ್ನು ಕಾಣಬಹುದು. ಆದರೆ 19 ನೆಯ ಶತಮಾನದಿಂದ ಇಲ್ಲಿ ಸೇವೆಯ ಸೋಗಿನಿಂದ ಬಂದಿಳಿದ ಕ್ರಿಶ್ಚಿಯನ್ ಮಿಷನರಿಗಳೂ, ಡ್ರಗ್ ಮಾಫಿಯಾದವರೂ, ಬಾಂಗ್ಲಾದೇಶದ ಮುಸ್ಲಿಂ ಎಡಪಂಥೀಯ ನುಸುಳುಕೋರರೂ ಬಂದು ಸೇರಿ ಸ್ಥಳೀಯ ಅರಣ್ಯವಾಸಿ ಆದಿ ಜನಾಂಗಗಳನ್ನು ಮತಾಂತರಗೊಳಿಸುತ್ತ ಅವರ ಜೀವಕ್ಕೇ ಅಪಾಯ ಒಡ್ಡುತ್ತ ಬೆದರಿಸುತ್ತಿದ್ದಾರೆ. ಮಹಾಭಾರತದ ಬಭ್ರುವಾಹನನ ನಾಡಾದ ಇದು, ಇಂದು ಭಾರತದೇಶದಲ್ಲಿಯೇ ಇದೆಯೇ ಎಂದು ಆಶ್ಚರ್ಯ ಪಡುವಷ್ಟು ಭಯಾನಕ ಹೀನ ಪರಿಸ್ಥಿತಿಯಲ್ಲಿದೆ. ಇಂದು ಸ್ವಲ್ಪವಾದರೂ ಈ ನಾಡಿಗೆ ಸಾಂಸ್ಕೃತಿಕ ಜೀವವುಳಿದಿದ್ದರೆ ಅದು ಮಣಿಪುರಿ ನೃತ್ಯದಿಂದ ಮಾತ್ರ.

ಸಂಶೋಧಕರು ತೆಲಂಗಾಣದ ಚಿಂದು ಯಕ್ಷಗಾನ ಪ್ರಕ್ರಿಯೆ ಬಗ್ಗೆಯೂ ಚಿಂದು ಭಾಗವತವನ್ನು ಆಡುವ ಮಾದಿಗರ ಬಗ್ಗೆ ಹೇಳುವಲ್ಲಿ ಪ್ರಾಚೀನದಲ್ಲಿ ತೆಲುಗು ಮಾತನಾಡುವ ಈ ಭೂಮಿಯು ಯಕ್ಷಭೂಮಿಯೆಂದು ಪ್ರಸಿದ್ಧವಾಗಿತ್ತೆಂದೂ, ಗಂಧರ್ವ ಜನಾಂಗಕ್ಕೆ ಸೇರಿದ ಯಕ್ಷರು ಅವರ ಸಂಗೀತ - ನೃತ್ಯಗಳಿಗೆ ಪ್ರಸಿದ್ಧರೆಂದೂ ಆದ್ದರಿಂದ ಅವರದೇ ಪ್ರಾಚೀನ ಪರಂಪರೆಯನ್ನು ಹೊಂದಿದ ಈ ಮಾದಿಗ ಜನಾಂಗಕ್ಕೆ ಯಕ್ಷಗಾನ ರಂಗಕಲೆಯು ಸುಲಭವಾಗಿಯೇ ಒಲಿಯುತ್ತದೆಂದೂ ಹೇಳಿದ್ದಾರೆ. ಈ ಸಂಗತಿಯು ನೇಪಾಳದ ಗಂಧರ್ವ ಜನಾಂಗವು ಈಗ ಹರಿಜನರೆಂದು ಕರೆಯಲ್ಪಡುವುದರ ಬಗ್ಗೆ ಆಲೋಚಿಸುವಂತೆ ಮಾಡುತ್ತದೆ. ಮಹ + ಆದಿಯವರೆನ್ನುವ ಈ ಮಾದಿಗ ಜನಾಂಗವು ಆದಿಯಲ್ಲಿ ಗಂಧರ್ವ ಜನಾಂಗವಾಗಿದ್ದರೇ ಎಂಬುದರ ಬಗ್ಗೆ ಸಂಶೋಧನೆಗಳಾಗಬೇಕಾದ ಅವಶ್ಯಕತೆ ಇದೆ.

ನೇಪಾಳದ ಕಠ್ಮಂಡುವಿನಲ್ಲಿ ಗಂದರ್ಭ (गन्धर्व) ಅಥವಾ ಗಾಯಿನೆ ಎಂಬ ಇಂಡೋ - ಆರ್ಯನ್ ಬುಡಕಟ್ಟಿನವರು ಇದ್ದಾರೆ. ಆದರೆ ಇವರನ್ನು ಸರ್ಕಾರವು ದಲಿತರ ಗುಂಪಿಗೆ ಸೇರಿಸಿದೆ ! ಈ ಜನಾಂಗವು ನೇಪಾಳದ ಪರ್ವತ ಪ್ರದೇಶದವರು. ಪಾರಂಪರಿಕ ಗಾಯನಕಲೆಯುಳ್ಳ ಈ ಜನಾಂಗವು ತಮ್ಮ ಜೀವನೋಪಾಯವಾಗಿ ಗಂದರ್ಭ ಗೀತ್ ಅಥವಾ ಗಾಯಿನೆ ಗೀತ್ ಎಂಬ ಜನಪದ ಗೀತೆಗಳನ್ನು ಹಾಡುತ್ತಾರೆ. ಗಾಯನಕ್ಕೆ ಸಹವಾದನವಾಗಿ ಸಾರಂಗಿಯೆಂಬ ತಂತೀವಾದ್ಯವನ್ನು ನುಡಿಸುತ್ತಾರೆ. ಇದು ಅವರಿಗೆ ಪ್ರಮುಖವಾದ ವಾದ್ಯವಾಗಿದ್ದು ನೇಪಾಳದಲ್ಲಿ ಈ ಸಾರಂಗಿವಾದ್ಯವು ಗಂದರ್ಭ ಬುಡಕಟ್ಟಿನದೇ ಎಂದು ಗುರುತಿಸಲ್ಪಡುತ್ತದೆ. ಈಗೀಗ ಕೆಲವು ಗಂದರ್ಭರು (ಗಂಧರ್ವರು) ತಮ್ಮ ಗೀತಗಾಯನದಿಂದ ಪ್ರಸಿದ್ಧರೂ ಆಗುತ್ತಿದ್ದಾರೆ. ಲೇಖನಾಂತ್ಯದಲ್ಲಿ ಬಲರಾಮ ಗಂದರ್ಭ ಎನ್ನುವ ಕಲಾವಿದನ ಗಾಯನದ ಅಂತರ್ಜಾಲ ಕೊಂಡಿಯೊಂದನ್ನು ನೀಡಿದೆ.



No part of this publication is allowed for copying or reproducing. Copyright protected. Copyright infringement is punishable offence.

**ನೂಪುರ ಭ್ರಮರಿ–ನೃತ್ಯಸಂಶೋಧನ ನಿಯತಕಾಲಿಕೆ (2321– 2519 ISSN NO)**
**ಸಂಚಿಕೆ 2; ಸಂಪುಟ 15 2021 ; ಅಂಕಣ- ಭರತಕೌತುಕ**



ಗಂಧರ್ವ, ಕಿನ್ನರ, ಕಿಂಪುರುಷರಿದ್ದ ನಾಡನ್ನು ಈ ನಕ್ಷೆಯಲ್ಲಿ ನೋಡಬಹುದು.

**<u>ನಮ್ಮ ಪುರಾಣ ಪ್ರಸಿದ್ಧ ಜನಾಂಗಗಳು ಅಪಾಯದ ಅಂಚಿನಲ್ಲಿ! –</u>**
ಪ್ರಾಚೀನದಿಂದಲೂ ನಮ್ಮ ದೇಶದ ಮೇಲೆ ಅನೇಕ ರೀತಿಯ ದಾಳಿಗಳೂ ದೌರ್ಜನ್ಯಗಳೂ ಆಗುತ್ತಲೇ ಬಂದಿವೆ. ಅದರಲ್ಲಿ ಹೆಚ್ಚು ಶೋಚನೀಯವಾದದ್ದು, ಅಪಾಯಕರವಾದುದು ಸಂಸ್ಕೃತಿಯ ಮೇಲೆ ನಡೆದಂತಹುದು. ಯಾವುದೇ ದೇಶದ ಅಸ್ಮಿತೆಯು ಅದರ ಆಧ್ಯಾತ್ಮಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಯ ಅಡಿಪಾಯದ ಮೇಲೆಯೇ ನಿಂತಿರುವಂತಹುದು. ಅದು ನಾಶವಾದರೆ ದೇಶವು ತನ್ನ ಅಸ್ತಿತ್ವವನ್ನು ಶಾಶ್ವತವಾಗಿ ಕಳೆದುಕೊಳ್ಳುತ್ತದೆ. ಈ ರೀತಿಯಾಗಿ ಪ್ರಪಂಚದ ಅನೇಕ ದೇಶಗಳು ತಮ್ಮ ಅಸ್ಮಿತೆಯನ್ನು ಶಾಶ್ವತವಾಗಿ ಕಳೆದುಕೊಂಡವು. ಭಾರತವೂ ಆಧುನಿಕತೆಯ, ಆರ್ಥಿಕವಾದ, ಮೂಲಭೂತವಾದ ಸೌಲಭ್ಯಗಳ ನೆಪದಲ್ಲಿ ಮಾರುಹೋಗುವ ಜನರಿಂದಾಗಿ ಇದೇ ದುಃಸ್ಥಿತಿಯಲ್ಲಿ ಇದೆ. ಕೆಳಗೆ ನೀಡಿರುವಂತಹುದು ಜೋಷುವಾ ಪ್ರಾಜೆಕ್ಟ್ ಎಂಬ ಕ್ರಿಶ್ಚಿಯನ್ ಮಿಶಿನರಿಯವರು ಗಂಧರ್ವರ ಬಗ್ಗೆ ನೀಡಿರುವ ಕೆಲವು ಮಾಹಿತಿಗಳು. ಅವರ ಫೇಸ್ಬುಕ್ ಪೇಜ್ನಲ್ಲಿ ಇರುವುದನ್ನು ಹಾಗೆಯೇ ನೀಡಿದೆ. ಈ ಪ್ರಾಜೆಕ್ಟ್ ನವರು ವಿಶ್ವಾದ್ಯಂತ ಎಲ್ಲ ಜನಾಂಗಗಳದ್ದೂ ಸಂಶೋಧನೆಗಳನ್ನು ಮಾಡಿ, ಕ್ರಿಶ್ಚಿಯಾನಿಟಿಗೆ ಜನರನ್ನು ಸೇರಿಸುವ ಪ್ರಯತ್ನದಲ್ಲಿ ಸತತವಾಗಿ ನಿರತರಾಗಿದ್ದಾರೆ.



ಶ್ರೀ ಶಾರ್ಙ್ಗದೇವನು ಗಂಧರ್ವರೆಂಬ ಅತಿಮಾನವರು ಪ್ರಯೋಗಿಸುತ್ತಿದ್ದ ಅತಿಪ್ರಾಚೀನ ಸಂಗೀತ ಪದ್ಧತಿಯೇ ಗಾಂಧರ್ವವೆಂದು ಹೇಳಿದ್ದನಲ್ಲವೇ? ಗಾಂಧರ್ವವು ಅನಾದಿ ಸಂಪ್ರದಾಯವುಳ್ಳದ್ದು ಎಂದರೆ ವೇದದಂತೆ ಅಪೌರುಷೇಯವಾದುದು. ಗಂಧರ್ವರಿಂದ ಮಾತ್ರ ಪ್ರಯುಕ್ತವಾಗುವಂತಹುದು. ಎಂದರೆ ಮನ ಬಂದಂತೆ ಹಾಡುವಂತಹುದಲ್ಲ. ನಿಯತವಾದ ಗ್ರಹಾಂಶಮೂರ್ಛನಾದಿನಿಯಮಗಳಿಂದ ಬದ್ಧವಾದುದು. ಐಹಿಕ ಸುಖವನ್ನೂ ಧರ್ಮಾರ್ಥಕಾಮ ಮೂಲವಾದ ಸ್ವರ್ಗವನ್ನೂ ಅಪವರ್ಗವಾದ ಮೋಕ್ಷವನ್ನೂ ಉಂಟುಮಾಡುವಂತಹುದೆಂದೂ

Copyright protected

No part of this publication is allowed for copying or reproducing. Copyright protected. Copyright infringement is punishable offence.

ನಂಬಿಕೆಯಿದ್ದ ಈ ಗಂಧರ್ವ ಜನಾಂಗದ ಸಂಗೀತದ ಗತಿ ಇಂದು ಏನಾಯಿತು? ಬಲಿಷ್ಠರಾಗಿದ್ದವರೂ, ಅತಿಮಾನುಷ ಶಕ್ತಿಯಿದ್ದವರೂ, ಯೋಧರೂ ಆಗಿದ್ದ ಪ್ರಾಚೀನ ಗಂಧರ್ವರು ಕಾಲಾಂತರದಲ್ಲಿ ಹೇಗೆ ಈ ರೀತಿಯ ಹೀನಾಯ ಬದುಕನ್ನು, ಏಕಾಗಿ ಬಾಳಬೇಕಾಯಿತೆಂದು ನಾವು ಆಲೋಚಿಸಬೇಡವೇ? ಈ ಮತಾಂತರಗಳ ಉದ್ದೇಶಗಳನ್ನೂ, ಪರಿಸ್ಥಿತಿ ಗಂಭೀರತೆಯೇನೆಂದೂ, ಇತಿಹಾಸದಿಂದ ತಿಳಿಯಲೇ ಬೇಕಾದ ಅಗತ್ಯವಿದೆ. ಇದೇ ಜನಾಂಗವು ಕಾಲಾಂತರದಲ್ಲಿ ವಿವಿಧ ಮತಗಳಿಗೆ ಏಕಾಗಿ ಮತಾಂತರ ಹೊಂದಿರಬಹುದೆಂದೂ ಜೋಷುವಾ ಪ್ರಾಜೆಕ್ಟ್ ನ್ನು ಕುರಿತು ಸೂಕ್ಷ್ಮವಾಗಿ ಓದಿ ನೋಡಿದರೆ ತಿಳಿದೀತು ! ಇದೇ ರೀತಿಯಾಗಿ ಭಾರತೀಯ ಬಹುತೇಕ ಎಲ್ಲ ಜನಾಂಗಗಳದ್ದೂ ಈ ಜೋಷುವಾ ಪ್ರಾಜೆಕ್ಟ್ ನ ಅಂತರ್ಜಾಲ ಕೊಂಡಿಯಲ್ಲಿ ಮಾಹಿತಿಗಳು ಸಿಗುತ್ತವೆ!! ಅವನ್ನು ಅವರ ಉದ್ದೇಶಕ್ಕೆ ತಕ್ಕಂತೆಯೇ ಬರೆದುಕೊಂಡಿದ್ದಾರೆ!! ಪರಿಸ್ಥಿತಿಯ ಗಂಭೀರ ಗಭೀರತೆಯನ್ನು ಅರ್ಥ ಮಾಡಿಕೊಂಡು ಪ್ರಜೆಗಳೂ, ಸರ್ಕಾರಗಳೂ ಇದರತ್ತ ಗಮನವನ್ನು ಹರಿಸಿ ತಕ್ಕ ಪರಿಹಾರೋಪಾಯಗಳನ್ನು ತತ್ ಕ್ಷಣವೇ ಅನುಷ್ಠಾನಕ್ಕೆ ತರಲೇಬೇಕಾಗಿದೆ. ಕೆಳಗಿನ ಬರಹಗಳನ್ನು ದಿನಾಂಕ 18 - 3 - 2019 ರಂದು ಯಥಾವತ್ತಾಗಿ ಗೂಗಲ್ ಕೊಂಡಿಯಿಂದ ನಕಲು ಮಾಡಿ ಕೆಳಗೆ ನೀಡಲಾಗಿದೆ. ಪೂಜನೀಯವಾಗಿದ್ದ ನಮ್ಮ ಪ್ರಾಚೀನದ, ಪುರಾಣ ಪ್ರಸಿದ್ಧ ಅನೇಕ ಜನಾಂಗಗಳು ಹೀಗೆ ಮತಾಂತರವನ್ನು ಹೊಂದಿ ತಮ್ಮ ಸಂಪ್ರದಾಯ, ಪರಂಪರೆಗಳಿಂದ ಕಳಚಿಕೊಂಡು, ಕಳೆದುಕೊಂಡು ಪರಿಶಿಷ್ಟ ಜಾತಿ, ಪಂಗಡಗಳೆಂದು ಹೆಸರು ಪಡೆದುಕೊಂಡೋ, ಮತಾಂತರಗಳಾಗಿಯೋ, ನಶಿಸಿಹೋಗಿವೆಯೋ ಹೋಗಿವೆ. ಈ ಸಾಧ್ಯತೆಗಳಿಗೆ ಕೆಳಗೆ ನೀಡಿದ ಜೋಷುವಾ ಪ್ರಾಜೆಕ್ಟ್ ದೊಂದು ಉದಾಹರಣೆ.

*Profile
Submit update
Introduction / History
The Gandharva sing in motor vehicles to earn extra money. Singing is their traditional occupation but is now dying out and may come to an end.

Where Are they Located?
The Gandharva moved from India to Nepal and live to some degree in the middle hill regions from east to west of Nepal. They are mostly in the Pokhara region and mainly in Batulechaour.

What Are Their Lives Like?
The Gandharva work now in service as laborers and some have their own businesses. Many of the young work as taxi drivers and some have food shops. They have improved financially and socially. The Gandharva are also called Gayak and Gaine and these names mean singing.

What Are Their Beliefs?
They are Hindus by religion.

Prayer Points
* Scripture Prayers for the Gandharva in Nepal.
* Pray that God will give the Gandharva dreams and visions leading them to Jesus Christ.
* Pray that gospel materials will lead them to salvation too.*

References -
http://www.pokharacity.com/an-indigenous-group-of-pokhara/

---

**ಆಕರ ಋಣ** —

No part of this publication is allowed for copying or reproducing. Copyright protected. Copyright infringement is punishable offence.

# ಭರತಮುನಿ ವಿರಚಿತ 'ನಾಟ್ಯಶಾಸ್ತ್ರ' — ಕನ್ನಡ ಅನುವಾದ, ವಿಮರ್ಶಕ ಟಿಪ್ಪಣಿ ಮತ್ತು ಅನುಬಂಧಗಳೊಡನೆ —ಆದ್ಯ ರಂಗಾಚಾರ್ಯ.

# 1.ವೀಣಾ ಲಕ್ಷಣ ವಿಮರ್ಶೆ —
2. ಶ್ರೀ ಮತಂಗಮುನಿ ವಿರಚಿತ 'ಬೃಹದ್ದೇಶೀ' — ಪೀಠಿಕೆ, ಪಠ್ಯಸಂಪಾದನ, ಅನುವಾದ, ಪಾಠವಿಮರ್ಶೆ, ಅನುಬಂಧ —
3. ಪುಂಡರೀಕಮಾಲಾ —
4. ಭಾರತೀಯ ಸಂಗೀತದಲ್ಲಿ ಪರಿಭಾಷಾ ಪ್ರಯೋಗ —
5.'ಏಳ'- ಒಂದು ಸಂಗೀತ ಶಾಸ್ತ್ರೀಯ ಅಧ್ಯಯನ.
6..ಕರ್ನಾಟಕದ ಕಲೆಗಳು - ಸಂಗೀತ
7. ರಾಮಾಯಣದಲ್ಲಿ ಸಂಗೀತ (ಲೇಖನ) — ರಾ. ಸತ್ಯನಾರಾಯಣ.
#.. ಕನ್ನಡ ಸಾಹಿತ್ಯ, ಶಾಸನಗಳಲ್ಲಿ ಸಂಗೀತ ವಿಚಾರ — ಎಂ. ಚಿದಾನಂದಮೂರ್ತಿ - ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು. 1984.
#.. ಪುರಾಣ ನಾಮ ಚೂಡಾಮಣಿ — ಬೆನಗಲ್ ರಾಮರಾವ್ ಮತ್ತು ಪಾನ್ಯಂ ಸುಂದರ ಶಾಸ್ತ್ರಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು. 1941.
#.. History of Sanskrit Poetics — Pandurang Vaman Kane. Motilal Banarasi Das Publ, 1971.
# Dictionary of Pali Proper Names, Volume 1.—G. P. Malalasekera (Gunapala Piyasena Malalasekera - 2007)
#..Hindu Mythology, Vedic and Puranic — W.J. Wilkins
#.. History of Sanskrit Poetics — P. V. Kane #..
#.. People of India. Uttar Pradesh. Vol. XLII, Part two. — Edited by A. Hasan & J.C. Das. (pp. 494 - 497)
#.. A Sanskrit - English Dictionary, entomologically and philiologically arranged — Sir Monier Monier Williams.
#.. ಆ Dictionary of Hinduism : Including it's Mythology, Religion, History. — Subhash Kapoor.
#.. Studies in Sanskrit Inscriptions of Ancient Cambodia — Mahesh Kumar Sharan. - Abhinav publication.
#.. Dakshina Kosala : A Rich Centre of Early Shivism — Natasja Bosma.
#.. Essays into Vietnamese Pasts — K. W. Taylor, John K. Whitmore.
#.. Encyclopedia of Higher Education :Historical survey - pre- independence period. — edited by Suresh Kant Sharma.

**ಗೂಗಲ್ ಕೊಂಡಿಗಳು. —**

#.. ಹಲವು ವಿಕಿಪೀಡಿಯಾಗಳು.
#.. https://www.wisdomlib.org/definition/hemasutra
#.. https://deccanviews.wordpress.com/2017/01/16/gandharvas-in-art-musicians-of-heaven/ ಇದರಲ್ಲಿ
ಗಂಧರ್ವ - ಅಪ್ಸರೆಯರ ಶಿಲ್ಪ ಚಿತ್ರಗಳಿವೆ.
#..
https://books.google.co.in/books?id=BLiCSTFOGnMC&pg=PA19&lpg=PA19&dq=inscriptions+on+gandharva&source=bl&ots=TZWPAqWXMx&sig=ACfU3U3Sxfaqr1pIw0edZmVpE3qvROxc0A&hl=en&sa=X&sqi=2&ved=2ahUKEwj4zO-_4IbhAhWKe30KHdanB-0Q6AEwDXoECAIQAQ#v=onepage&q=inscriptionshttps://
**#..** tamilandvedas.com/tag/gandharvas/%20on%20gandharva&f=false
#..
https://books.google.co.in/books?id=L6duRdH6qZAC&pg=PT316&lpg=PT316&dq=musical+gandharvas&source=bl&ots=kLPhoedbC7&sig=ACfU3U3rt4G-7pDMDY9g4HFkMHjRY-Puyw&hl=en&sa=X&ved=2ahUKEwjL1cmoyeLgAhUHMo8KHVniD8w4HhDoATACegQICBAB#v=onepage&q=musical%20gandharvas&f=false

Copyright Protected

#.. https://books.google.co.in/books?id=UMwUONSXKocC&pg=PA8&lpg=PA8&dq=gandharvas+who+defeated+by+bharata+in+ramayana&source=bl&ots=AsC1oAGHTj&sig=ACfU3U0VG2lTO8K1brPbmH6gGSggB6hapA&hl=en&sa=X&ved=2ahUKEwjrxtS_w6XoAhWozDgGHTsbB90Q6AEwEHoECAEQAQ#v=onepage&q=gandharvas%20who%20defeated%20by%20bharata%20in%20ramayana&f=false
#.. https://joshuaproject.net/people_groups/16776/IN ಇದರಲ್ಲಿ ಗಂಧರ್ವ ಜನಾಂಗವು ನೇಪಾಳದಲ್ಲಿ ನೆಲೆಸಿದ ಮಾಹಿತಿಯನ್ನು ಕಲೆಹಾಕುವ, ಕ್ರಿಶ್ಚಿಯಾನಿಟಿಯಲ್ಲಿ ಅವರಿಗೆ ದಾರಿಯನ್ನು ತೋರುವ ವಿಷಯಗಳಿಗೆ ಸಂಬಂಧಿಸಿದಂತೆ ವಿವರವಿದೆ!
#.. http://www.sacred-texts.com/hin/hmvp/hmvp48.htm#fr_449
#.. https://www.sciencedirect.com/science/article/pii/S0016718515301433
#.. ಪುರಾಣದೊಳಗೆ ಚರಿತ್ರೆಯ ಹೂರಣ — https://www.prajavani.net>
#.. http://www.mlbd.com/mdispinfo.asp?Field1=ISBN&String1=8120831055&Page=1&nxtPage=1 ಇದು ಮೋನಿಯರ್ ವಿಲಿಯಮ್ಸ್ ಶಬ್ದಕೋಶ
#.. https://hinduism.stackexchange.com/questions/3052/who-are-gandharvas.
#.. https://youtu.be/we3cPSZyYzw ಕೇರಳದ ದೇವಸ್ಥಾನದಲ್ಲಿ ಗಂಧರ್ವನ್ ಪಾಟ್ಟು ಹಾಗೂ ಅದಕ್ಕೆ ನೃತ್ಯ.
#.. https://tamilandvedas.com/tag/gandharvas/
#.. DD Prasara Bharati Archives. Doordarshan.

-----------

Copyright Protected